# M.C.C. BANK LTD

Estd - 1912

Admin. Office : M.C.C. Bank Building, Hampankatta, Mangaluru 575 001
Ph.: 2421369, 2445742, 2445745
Email : ho@mccbank.in Website : www.mccbank.in

## ಮಂಗಳೂರು ಕಥೋಲಿಕ್ ಕೊ-ಅಪರೇಟಿವ್ ಬ್ಯಾಂಕ್ ಲಿ

# ANNUAL REPORT ವಾರ್ಷಿಕ ವರದಿ

## 106ನೇ ವಾರ್ಷಿಕ ಸಾಮಾನ್ಯ ಸಭೆ




| ದಿನಾಂಕ | ಸಮಯ | ಸ್ಥಳ |
|---|---|---|
| 22-09-2024<br>ರವಿವಾರ | ಬೆಳಿಗ್ಗೆ ಘಂಟೆ<br>11.00ಕ್ಕೆ | ಲೊಯೊಲಾ ಹಾಲ್, ಸೈಂಟ್ ಆಲೋಶಿಯಸ್<br>ಪದವಿ ಪೂರ್ವ ಕಾಲೇಜು, ಕೊಡಿಯಲ್‌ಬೈಲ್, ಮಂಗಳೂರು |

# BOARD OF DIRECTORS


**Anil Lobo**
Chairman


**Jerald Jude D'Silva**
Vice Chairman

# DIRECTORS


Joseph A Patrao


Andrew D'Souza


Dr Gerald Pinto



David D'Souza


Elroy K Crasto


J P Rodrigues


Herold J Monteiro


Roshan D'Souza



Irene Rebello


Dr Freeda D'Souza


Melwin Vas


Vincent Lasrado


C G Pinto


Sushanth Saldanha

Professional Directors


Sunil Menezes
General Manager (i/c)

# ಅಧ್ಯಕ್ಷರ ನಲ್ನುಡಿ



ನಮ್ಮ ನಿಮ್ಮ ನಡುವೆ...

ಕಳೆದ ಐದು ವರುಷಗಳಿಂದ ನಿರಂತರ ನಿಮ್ಮೆಲ್ಲರೊಡನೆ ವಾರ್ಷಿಕ ವರದಿಯ ಮುಖಾಂತರ ನಾನು ನೇರ ಸಂಪರ್ಕದಲ್ಲಿದ್ದೇನೆ. ಇದು ನಮ್ಮ ನಿಮ್ಮ ನಡುವೆ ಆರನೇ ವಾರ್ಷಿಕ ವರದಿಯ ಮಾತುಕತೆ. ಈ ಸಂದರ್ಭದಲ್ಲಿ ಬ್ಯಾಂಕಿನ ಪ್ರಗತಿಯ ಕುರಿತು, ನಿಮ್ಮ ಆಯ್ಕೆಯ ಆಡಳಿತ ಮಂಡಳಿಯು ಸಾಧಿಸಿರುವ ಯಶಸ್ಸುಗಳ ಕುರಿತು ಹಂಚಿಕೊಳ್ಳಲು ದೊರಕಿರುವ ಈ ಅವಕಾಶ ನನಗೆ ಹಾಗೂ ನನ್ನ ನಾಯಕತ್ವದ ಆಡಳಿತ ಮಂಡಳಿಗೆ ತೀರಾ ಸಂತೋಷ ನೀಡುತ್ತಿದೆ.

ನಿಮ್ಮ ನಮ್ಮೆಲ್ಲರ ಅಭಿಮಾನದ ಎಮ್‌ಸಿಸಿ ಬ್ಯಾಂಕ್ 2023–24 ನೇ ಸಾಲಿನಲ್ಲಿ **ಒಂದು ಸಾವಿರ ಕೋಟಿ ವ್ಯವಹಾರದ** ಮಹತ್ವದ ಮೈಲುಗಲ್ಲನ್ನು ದಾಟಿ ಮುಂದಿನ ಸುಗಮ ಭವಿಷ್ಯದತ್ತ ದಾಪುಗಾಲಿಡುತ್ತಿದೆ. ನಾವು ಆಡಳಿತದ ಚುಕ್ಕಾಣಿ ಹಿಡಿಯುವಾಗ ಬರೇ ಎರಡು ಜಿಲ್ಲೆಗಳ ವ್ಯಾಪ್ತಿ ಮಾತ್ರ ಹೊಂದಿದ್ದ ಬ್ಯಾಂಕಿನ ಕಾರ್ಯವ್ಯಾಪ್ತಿಯನ್ನು 2022–23 ರಲ್ಲಿ ನಾವು ಐದು ಜಿಲ್ಲೆಗಳ ಕಾರ್ಯವ್ಯಾಪ್ತಿಗೆ ಹಿಗ್ಗಿಸಿದೆವು. ಪ್ರಸ್ತುತ ಸಾಲಿನಲ್ಲಿ ನಮ್ಮ ನಿರಂತರ ಪರಿಶ್ರಮದ ಫಲವಾಗಿ **ಬ್ಯಾಂಕಿನ ಕಾರ್ಯವ್ಯಾಪ್ತಿಯನ್ನು ಇಡೀ ಕರ್ನಾಟಕ ರಾಜ್ಯಕ್ಕೆ ಹಬ್ಬಿಸಲು** ಭಾರತೀಯ ರಿಸರ್ವ್ ಬ್ಯಾಂಕ್ ಅನುಮತಿಸಿದೆ. ವಿವಿಧ ಕಾರಣಗಳಿಗಾಗಿ ಕಳೆದ 22 ವರ್ಷಗಳ ಕಾಲಾವಧಿಯಲ್ಲಿ ಬ್ಯಾಂಕಿನ ಶಾಖೆಗಳ ವಿಸ್ತರಣೆ ಆಗಿರಲಿಲ್ಲ. ನಮ್ಮ ಕಾಲದಲ್ಲಿ ಬ್ಯಾಂಕಿನ ಎನ್‌ಪಿಎ (ಅನುತ್ಪಾದಕ ಆಸ್ತಿಗಳ) ಹೊರೆಯನ್ನು ತೀವ್ರಮಟ್ಟದಲ್ಲಿ ತಗ್ಗಿಸಿ ಭಾರತೀಯ ರಿಸರ್ವ್ ಬ್ಯಾಂಕಿನ ಎಲ್ಲಾ ಮಾನದಂಡಗಳನ್ನು ಪೂರ್ಣಗೊಳಿಸಿ 3, ಮಾರ್ಚ್, 2024 **ರಂದು ಬ್ರಹ್ಮಾವರದಲ್ಲಿ ಬ್ಯಾಂಕಿನ 17 ನೇ ಶಾಖೆಯನ್ನು** ನಾವು ಪ್ರಾರಂಭಿಸಿದೆವು.

ಈ ವರ್ಷದ ವ್ಯವಹಾರದಿಂದ ನಮ್ಮ ಬ್ಯಾಂಕ್ ದಾಖಲೆಯ 10.45 ಕೋಟಿ ಲಾಭಗಳಿಸಿದೆ ಹಾಗೂ ನಿವ್ವಳ ಎನ್‌ಪಿಎ ಮಟ್ಟವು 1.12% ಕ್ಕೆ ಇಳಿದಿದೆ. ಬ್ಯಾಂಕಿಂಗ್ ಉದ್ದಿಮೆಯ ಒತ್ತಡಗಳ ನಡುವೆಯೂ ಈ ಸಾಧನೆ ನಿಜಕ್ಕೂ ವಿಸ್ಮಯಕಾರಿ. ನಮ್ಮ ಬ್ಯಾಂಕಿನಲ್ಲಿ ಕನಿಷ್ಠ ದರದಲ್ಲಿ ನಾವು ವಿದ್ಯಾಭವಿಷ್ಯ ಶಿಕ್ಷಣ ಸಾಲ ನೀಡುತ್ತಿದ್ದು ಈ ಕ್ಷೇತ್ರದಲ್ಲಿ ಉತ್ತಮ ವ್ಯವಹಾರ ನಡೆದಿದೆ ಹಾಗೂ ಜನಬೆಂಬಲವೂ ಲಭಿಸಿದೆ. ಆಭರಣ ಸಾಲ ಕ್ಷೇತ್ರದಲ್ಲಿ ಎಂದಿನಂತೆ ನಾವು ತುಂಬಾ ಮುಂದಿದ್ದೇವೆ. ಇಡೀ ಕರ್ನಾಟಕದ ವ್ಯಾಪ್ತಿಯನ್ನು ಪಡೆದುಕೊಂಡು ಅಭಿವೃದ್ಧಿಪಥದಲ್ಲಿ ಸಾಗುತ್ತಿರುವ ನಮ್ಮ–ನಿಮ್ಮ ಬ್ಯಾಂಕಿನ ಅಗತ್ಯಗಳನ್ನು ಗಮನದಲ್ಲಿಟ್ಟು ವಿಸ್ತರಣೆಗೆ ತಕ್ಕಂತಹ ಆಕರ್ಷಣೀಯ ಹಾಗೂ ಸುವ್ಯವಸ್ಥಿತವಾದ ಕೇಂದ್ರ ಕಚೇರಿಯನ್ನು ಒದಗಿಸುವ ಉದ್ದೇಶದಿಂದ 'ಫ್ಯೂಚರಿಸ್ಟಿಕ್ ಸ್ಟೇಟ್ ಆಫ್ ಆರ್ಟ್' ವ್ಯವಸ್ಥೆಯಲ್ಲಿ ಅದನ್ನು ಪುನರ್‌ನಿರ್ಮಾಣ ಮಾಡಲಾಗಿದೆ. ಬ್ಯಾಂಕಿನ ಸಿಬ್ಬಂದಿಗಳ ಕಾರ್ಯಕ್ಷಮತೆ ಹೆಚ್ಚಿಸಲು ಹಾಗೂ ಧನಾತ್ಮಕ ಪ್ರೇರೇಪಣೆ ನೀಡುವುದಕ್ಕಾಗಿ, 'ಇನ್ ಹೌಸ್ ಟ್ರೇಯ್ನಿಂಗ್' ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಮುಂದುವರಿಸಲಾಗಿದೆ.

ನಿಮ್ಮ ಬೆಂಬಲದಿಂದ ಮುಂದಿನ ಎರಡು ವರ್ಷಗಳಲ್ಲಿ **ಬ್ಯಾಂಕಿನ ಎಂಟು ಹೊಸ ಶಾಖೆಗಳನ್ನು ಆರಂಭಿಸಲು** ಆಯೋಜಿಸಲಾಗಿದೆ. ಇದರಿಂದಾಗಿ ಮುಂದೆ ಬ್ಯಾಂಕಿನ ವ್ಯವಹಾರ ಖಂಡಿತ ಹೆಚ್ಚುವುದು, ಈ ನಿಟ್ಟಿನಲ್ಲಿ ಹೆಚ್ಚಿನ ಮಾನವ ಸಂಪನ್ಮೂಲದ ಅಗತ್ಯ ಕಂಡುಬರುವುದರಿಂದ **50 ಹೊಸ ಸಿಬ್ಬಂದಿಗಳ ನೇಮಕಾತಿ** ಮಾಡಲಾಗಿದೆ. ಇದಕ್ಕಾಗಿ **ಸಿಬ್ಬಂದಿ ವೃಂದಬಲ ಹೆಚ್ಚಿಸುವುದು** ಅನಿವಾರ್ಯವಾಗಿದೆ. **ಡಿಜಿಟಲ್ ಯುಗದ ಅಗತ್ಯವಾದ** ಯುಪಿಐ, ಗೂಗಲ್ ಪೇ, ಫೋನ್ ಪೇ ಸೇವೆಗಳನ್ನು ಆರಂಬಿಸಲು ಕ್ರಿಯಾಯೋಜನೆ ಹಮ್ಮಿಕೊಳ್ಳಲಾಗಿದೆ.

ನಮ್ಮ ಎಲ್ಲಾ ಯೋಜನೆಗಳ ಯಶಸ್ಸಿಗೆ ಬ್ಯಾಂಕಿನ ಅಮೂಲ್ಯ ಪಾಲುದಾರರಾದ ನೀವು ಕಾರಣಕರ್ತರು. ನಿಮ್ಮೆಲ್ಲರ ಬೆಂಬಲದಿಂದ ಬ್ಯಾಂಕಿನ ನಿರಂತರ ಬೆಳವಣಿಗೆಗೆ ಅಹರ್ನಿಶಿ ಶ್ರಮಿಸುತ್ತಿರುವ ನನ್ನ ಒಲುಮೆಯ ಎಲ್ಲಾ ನಿರ್ದೇಶಕರ ಹಾಗೂ ಸಿಬ್ಬಂದಿ ವರ್ಗದವರ ಕಠಿಣ ಶ್ರಮದ ಫಲವಾಗಿ ಬ್ಯಾಂಕು ಸರ್ವತೋಮುಖ ಪ್ರಗತಿ ಸಂಪಾದಿಸಿದ್ದು ಇದನ್ನು ಗುರುತಿಸಿದ ಕರ್ನಾಟಕ ಸರ್ಕಾರ ನನಗೆ 'ಸಹಕಾರ ರತ್ನ' ಪ್ರಶಸ್ತಿ ನೀಡಿ ನಮ್ಮೆಲ್ಲರ ಪರಿಶ್ರಮವನ್ನು ಗೌರವಿಸಿದೆ. ಈ ಗೌರವದಿಂದ ಬ್ಯಾಂಕಿನ ಯಶೋಯಾತ್ರೆಯನ್ನು ಸದಾ ಕಾಯ್ದುಕೊಳ್ಳುವ ಜವಾಬ್ಧಾರಿಯೂ ನಮ್ಮ ಮೇಲಿದೆ. ನಿಮ್ಮೆಲ್ಲರ ಸಹಕಾರಕ್ಕೆ ಮಗದೊಮ್ಮೆ ಧನ್ಯವಾದ ಸಲ್ಲಿಸುತ್ತಾ ಈ ನಮ್ಮ ನಿಮ್ಮ ನಡುವಿನ ಮಾತುಕತೆಯನ್ನು ಸಮಾಪ್ತಿಗೊಳಿಸುತ್ತೇನೆ.

– **ಅನಿಲ್ ಲೋಬೊ,** ಅಧ್ಯಕ್ಷರು

# ಮಂಗಳೂರು ಕಥೋಲಿಕ್ ಕೊ-ಅಪರೇಟಿವ್ ಬ್ಯಾಂಕ್ (ನಿ),

**ಹಂಪನಕಟ್ಟ, ಮಂಗಳೂರು**

## ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು

ಮಂಗಳೂರು ಕಥೋಲಿಕ್ ಕೊ-ಅಪರೇಟಿವ್ ಬ್ಯಾಂಕ್ (ನಿ.) ಇದರ 106ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 22.09.2024 ರವಿವಾರ ಬೆಳಿಗ್ಗೆ 11.00 ಘಂಟೆಗೆ ಸರಿಯಾಗಿ ಲೊಯೊಲಾ ಹಾಲ್, ಸೈಂಟ್ ಆಲೋಶಿಯಸ್ ಪದವಿ ಪೂರ್ವ ಕಾಲೇಜು, ಕೊಡಿಯಲ್‌ಬೈಲ್, ಮಂಗಳೂರು ಇಲ್ಲಿ ಜರಗಲಿದ್ದು, ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಗುವುದು.

### ಕಾರ್ಯಸೂಚಿ

1. ಸಭೆಯ ನೋಟೀಸನ್ನು ಓದಿ ದಾಖಲಿಸುವುದು (ಪುಟ ಸಂಖ್ಯೆ 2)
2. ಹಿಂದಿನ ಸಾಮಾನ್ಯ ಸಭೆಯ ನಡವಳಿಕೆಗಳನ್ನು ಓದಿ ದೃಢೀಕರಿಸುವುದು
3. 2023–24ನೇ ಸಾಲಿನ ಬ್ಯಾಂಕಿನ ಆಡಳಿತ ಮಂಡಳಿಯ ವರದಿಯನ್ನು ಓದಿ ಅಂಗೀಕರಿಸುವುದು (ಪುಟ ಸಂಖ್ಯೆ 3–5)
4. 2023–24ರ ಲಾಭ ನಷ್ಟ ಹಾಗೂ ಆಸ್ತಿ ಜವಾಬ್ದಾರಿ ತ:ಖ್ತೆಯನ್ನು ಮಂಜೂರು ಮಾಡುವುದು. (ಪುಟ ಸಂಖ್ಯೆ 6–11)
5. 2023–24ನೇ ಸಾಲಿನ ಲೆಕ್ಕ ಪರಿಶೋಧಕರ ವರದಿ ಮತ್ತು ಮಂಡಳಿಯ ಅನುಪಾಲನಾ ವರದಿಯನ್ನು ಪರಿಗಣಿಸುವುದು. (ಪುಟ ಸಂಖ್ಯೆ 12)
6. 2024–25ನೇ ಸಾಲಿನ ಆಡಳಿತ ಮಂಡಳಿಯವರು ಸೂಚಿಸಿದ ಕಾರ್ಯವ್ಯವಹಾರಗಳ ಅನುಮೋದನೆ. (ಪುಟ ಸಂಖ್ಯೆ 13)
7. 2023–24ನೇ ಸಾಲಿಗೆ ಮಂಜೂರಾಗಿದ್ದ ಬಜೆಟಿನ ಮಿತಿಗಿಂತ ಮೀರಿದ ಆದ ವೆಚ್ಚವನ್ನು ಮಂಜೂರು ಮಾಡುವುದು. (ಪುಟ ಸಂಖ್ಯೆ 13)
8. 2024–25ನೇ ಸಾಲಿನ ವಾರ್ಷಿಕ ಬಜೆಟನ್ನು ಪರಿಶೀಲಿಸಿ ಮಂಜೂರು ಮಾಡುವುದು. (ಪುಟ ಸಂಖ್ಯೆ 14)
9. 2023–24ನೇ ಸಾಲಿನ ನಿವ್ವಳ ಲಾಭ ವಿಂಗಡನೆಗೆ ಮಂಜೂರಿ ಕೊಡುವುದು. (ಪುಟ ಸಂಖ್ಯೆ 15)
10. 2024–25ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿಯ ಅನುಮೋದನೆ. (ಪುಟ ಸಂಖ್ಯೆ 15)
11. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ. (ಪುಟ ಸಂಖ್ಯೆ 15)
12. ಬ್ಯಾಂಕಿನ ಹೆಸರು ಬದಲಾವಣೆ ಮಾಡುವ ಕುರಿತು
13. ಬ್ಯಾಂಕಿನ ಉಪವಿಧಿಗಳಿಗೆ ತಿದ್ದುಪಡಿ (ಪುಟ ಸಂಖ್ಯೆ 16)
14. ಬ್ಯಾಂಕಿನ ಸಿಬ್ಬಂದಿ ವೃಂದಬಲವನ್ನು ಹೆಚ್ಚಿಸುವ ಬಗ್ಗೆ
15. ಮುನ್ಸೂಚನೆಯ ಮೇರೆಗೆ ಸಭಾಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ವಿಷಯಗಳು

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

25–07–2024

**ಮಹಾಪ್ರಬಂಧಕರು (ಪ್ರ)**

**ಸೂಚನೆ:**

1. ಬ್ಯಾಂಕಿನ ಲೆಕ್ಕ ಪತ್ರಗಳಿಗೆ ಸಂಬಂಧಪಟ್ಟ ಹಾಗೂ ಇತರ ಯಾವುದೇಮಾಹಿತಿಗಳ ಬಗ್ಗೆ ಸ್ಪಷ್ಟನೆ ಬೇಕಿದ್ದಲ್ಲಿ 5 ದಿವಸಗಳ ಮುಂಚಿತವಾಗಿ ಬ್ಯಾಂಕಿನ ಮಹಾಪ್ರಬಂಧಕರ ಗಮನಕ್ಕೆ ತರತಕ್ಕದ್ದು.
2. **ಸದಸ್ಯರಿಗೆ ಗುರುತಿನ ಚೀಟಿ ಕಡ್ಡಾಯವಾಗಿದೆ. ಸದಸ್ಯರು ಮಹಾಸಭೆಗೆ ಬರುವಾಗ ಗುರುತು ಚೀಟಿಯನ್ನು ಹಾಗೂ ವರದಿ ಪುಸ್ತಕವನ್ನು ತಪ್ಪದೇ ತರಬೇಕಾಗಿ ವಿನಂತಿ.**
3. **ಮಹಾಸಭೆಗೆ ಬ್ಯಾಂಕಿನ ಸದಸ್ಯರಲ್ಲದವರಿಗೆ ಭಾಗವಹಿಸಲು ಅವಕಾಶವಿಲ್ಲ.**

(ಸಭೆಯ ನಂತರ ಸದಸ್ಯರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ.)

ಕಾರ್ಯಸೂಚಿ-3

# ಮಂಗಳೂರು ಕಥೋಲಿಕ್ ಕೊ-ಅಪರೇಟಿವ್ ಬ್ಯಾಂಕ್ (ನಿ)

ಹಂಪನಕಟ್ಟ, ಮಂಗಳೂರು

## ವಾರ್ಷಿಕ ವರದಿ

ಬ್ಯಾಂಕಿನ 106ನೇ ವಾರ್ಷಿಕ ಮಹಾಸಭೆಗೆ ಸದಸ್ಯರೆಲ್ಲರನ್ನೂ ಸ್ವಾಗತಿಸುತ್ತಾ, 2023-24ನೇ ಸಾಲಿನ ವಾರ್ಷಿಕ ವರದಿಯನ್ನು ನಿಮ್ಮ ಮುಂದಿಡುತ್ತಿದ್ದೇವೆ. ಎಮ್.ಸಿ.ಸಿ. ಬ್ಯಾಂಕು ಇಡೀ ಕರ್ನಾಟಕದಲ್ಲಿ ತನ್ನ ಕಾರ್ಯವ್ಯಾಪ್ತಿ ಹೊಂದಿದ್ದು, ಒಟ್ಟು 17 ಶಾಖೆಗಳನ್ನೊಳಗೊಂಡು, ರೂ.635.70 ಕೋಟಿ ಠೇವಣಿ ಹಾಗೂ ರೂ.444.80 ಕೋಟಿ ಸಾಲಗಳನ್ನೊಳಗೊಂಡ ಒಟ್ಟು ರೂ.1080.50 ಕೋಟಿ ವ್ಯವಹಾರ ಮಾಡುತ್ತಿದ್ದು, ಈ ವರ್ಷ ದಾಖಲೆಯ ಲಾಭ ಗಳಿಸಿರುತ್ತದೆ. ನಮ್ಮ ಬ್ಯಾಂಕಿನ ಮಾರ್ಚ್ 2024ರಲ್ಲಿ ಪ್ರಾರಂಭವಾದ ಹೊಸ ಶಾಖೆ (ಬ್ರಹ್ಮಾವರ)ಯನ್ನು ಬಿಟ್ಟು ಉಳಿದ ಎಲ್ಲಾ ಶಾಖೆಗಳು ಲಾಭ ಗಳಿಸಿರುತ್ತವೆ ಎಂಬುದನ್ನು ಈ ಸಂದರ್ಭದಲ್ಲಿ ಸದಸ್ಯರ ಗಮನಕ್ಕೆ ತರಬಯಸುತ್ತೇವೆ. ಈ ಸಾಧನೆಗೆ ಬ್ಯಾಂಕಿನಲ್ಲಿ ವಿವಿಧ ಸುಧಾರಿತ ಸೌಲಭ್ಯಗಳು ಹಾಗೂ ಗ್ರಾಹಕರಿಗೆ ಕೊಡುವ ಹಸನ್ಮುಖ ಸೇವೆಯು ಕಾರಣವಾಗಿರುತ್ತದೆ. ಬ್ಯಾಂಕಿನ ಪ್ರಗತಿಯ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಿರುವ ಸಮರ್ಥ ಆಡಳಿತ ಮಂಡಳಿ, ಅದಕ್ಕನುಗುಣವಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದ ಶ್ರಮ, ಸದಸ್ಯರ ಹಾಗೂ ಗ್ರಾಹಕರ ಪ್ರೋತ್ಸಾಹ, ಬೆಂಬಲ ಮತ್ತು ಸಹಕಾರವೂ ಈ ಸಾಧನೆಗೆ ಕಾರಣವಾಗಿರುತ್ತದೆ.

ಪ್ರಸ್ತುತ ಸಹಕಾರಿ ವರ್ಷದ ಆದಾಯ ವೆಚ್ಚದ ವಿವರ ಹಾಗೂ ವಾರ್ಷಿಕ ವರದಿಯೊಂದಿಗೆ ಲೆಕ್ಕ ಪತ್ರದ ಸಂಕ್ಷಿಪ್ತ ಪಟ್ಟಿಯನ್ನು ತಮ್ಮ ಮುಂದೆ ಮಂಡಿಸಲು ಬಯಸುತ್ತೇವೆ. ಕಳೆದ ಐದು ವರ್ಷಗಳಲ್ಲಿ ಬ್ಯಾಂಕಿನ ಸಾಧನೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ವಿವರಗಳು | ವರ್ಷಾಂತ್ಯಕ್ಕೆ | | | | |
|---|---|---|---|---|---|---|
| | | 31.03.2020 | 31.03.2021 | 31.03.2022 | 31.03.2023 | 31.03.2024 |
| 1. | ಪಾಲು ಬಂಡವಾಳ | 1604.49 | 1843.32 | 1842.78 | 2736.15 | 3120.83 |
| 2. | ಮೀಸಲು ನಿಧಿ ಮತ್ತು ಇತರ ನಿಧಿಗಳು | 4187.90 | 4406.90 | 5006.27 | 6418.85 | 7562.82 |
| 3. | ಠೇವಣಿ | 39430.41 | 45684.85 | 53208.63 | 57794.91 | 63570.13 |
| 4. | ಸಾಲ ಮತ್ತು ಮುಂಗಡ | 26506.38 | 30661.41 | 32856.15 | 35530.43 | 44488.30 |
| 5. | ಹೂಡಿಕೆ | 16757.37 | 18872.94 | 24731.64 | 27624.63 | 24529.64 |
| 6. | ನಿವ್ವಳ ಲಾಭ | 245.88 | 596.73 | 827.40 | 1038.82 | 1045.20 |
| 7. | ನಿವ್ವಳ ಎನ್‌ಪಿಎ | 7.17% | 1.92% | 1.62% | 1.37% | 1.12% |

**ದುಡಿಯುವ ಬಂಡವಾಳ :** 2024 ವರ್ಷದ ಅಂತ್ಯಕ್ಕೆ ಬ್ಯಾಂಕಿನ ಒಟ್ಟು ದುಡಿಯುವ ಬಂಡವಾಳವು ರೂ.752.95 ಕೋಟಿ ಇರುತ್ತದೆ.

**ಸಾಲ ಮತ್ತು ಠೇವಣಿ ಅನುಪಾತ :** 2023 ವರ್ಷದ ಅಂತ್ಯಕ್ಕೆ ಬ್ಯಾಂಕಿನ ಸಾಲ ಮತ್ತು ಠೇವಣಿ ಅನುಪಾತವು 69.97% ಆಗಿರುತ್ತದೆ. 2024 ವರ್ಷದ ಅಂತ್ಯಕ್ಕೆ ಅನುತ್ಪಾದಕ ಸಾಲಕ್ಕೆ ಒದಗಿಸಿದ ಅವಕಾಶದ ಅನುಪಾತವು (Provision coverage ratio) 78.34% ಆಗಿರುತ್ತದೆ.

**ಆಡಳಿತ:** ವರದಿ ವರ್ಷದಲ್ಲಿ ವ್ಯವಸ್ಥಾಪನ ಸಮಿತಿಯ 32 ಸಭೆಗಳು, ಆಡಳಿತ ಮಂಡಳಿಯ 16 ಸಭೆಗಳು ಜರುಗಿದ್ದು, ಸಾಲ ಮಂಜೂರಾತಿ ಸಮಿತಿಯ 51 ಸಭೆಗಳು, ಆಡಿಟ್ ಸಮಿತಿಯ 9 ಹಾಗೂ ಕಾರ್ಯಕಾರಿ ಸಮಿತಿಯ 8 ಸಭೆಗಳು ಜರುಗಿರುತ್ತವೆ.

**CRAR ಪ್ರಮಾಣ :** ಬ್ಯಾಂಕಿನ CRAR ಪ್ರಮಾಣವು ಕಳೆದ ವರ್ಷದಲ್ಲಿ ಶೇಕಡಾ 20.45 ಆಗಿದ್ದು, ವರದಿ ವರ್ಷದಲ್ಲಿ ಶೇಕಡಾ 23.06 ಇದ್ದು, ಇದು ರಿಸರ್ವ್ ಬ್ಯಾಂಕಿನವರು ನಿಗದಿಪಡಿಸಿದ ಕನಿಷ್ಟ ಮಿತಿ ಶೇ 12ಕ್ಕಿಂತ ಹೆಚ್ಚಿರುತ್ತದೆ. ಇದರ ಮುಖೇನ ಬ್ಯಾಂಕ್ ಸುಧೃಡವಾಗಿದೆ ಎಂಬುದನ್ನು ತೋರಿಸುತ್ತದೆ.

**ಆಡಿಟ್ ವರ್ಗೀಕರಣ:** ಸತತ 13 ವರ್ಷಗಳಿಂದ ಬ್ಯಾಂಕ್ ಲೆಕ್ಕ ಪರಿಶೋಧನೆಯಲ್ಲಿ 'A' ಶ್ರೇಣಿಯ ಸಹಕಾರಿ ಸಂಘವಾಗಿ ಗುರುತಿಸಲ್ಪಟ್ಟಿದ್ದು, ಬ್ಯಾಂಕ್ ಆರ್ಥಿಕವಾಗಿ ಸುಧೃಡವಾಗಿದೆ ಎಂಬುದನ್ನು ತೋರಿಸುತ್ತದೆ.

- ವರದಿ ವರ್ಷದಲ್ಲಿ 7 ಜಿಲ್ಲೆಗಳಿಗೆ ಸೀಮಿತವಾಗಿದ್ದ (ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗು) ಬ್ಯಾಂಕಿನ ಕಾರ್ಯಕ್ಷೇತ್ರವನ್ನು ಇಡೀ ಕರ್ನಾಟಕ ರಾಜ್ಯಕ್ಕೆ ವಿಸ್ತರಿಸಲಾಗಿದೆ. ಈ ಜಿಲ್ಲೆಗಳಲ್ಲಿ ಬ್ಯಾಂಕಿನ ವ್ಯವಹಾರವನ್ನು ಹೆಚ್ಚಿಸಲು ಹಾಗೂ ಬ್ಯಾಂಕಿನ ಶಾಖೆಗಳನ್ನು ಮುಂದಿನ ದಿನಗಳಲ್ಲಿ ಆರಂಭಿಸಲು ಸಹಕಾರಿಯಾಗಲಿದೆ.

- ಬ್ಯಾಂಕಿನ ಸಂಸ್ಥಾಪಕರ ದಿನವನ್ನು ದಿನಾಂಕ 07.05.2023ರಂದು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥಾಪಕರ ಛಾಯಾಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಮನ ಸಲ್ಲಿಸಲಾಯಿತು.
- ಬ್ಯಾಂಕಿನ ಆರ್ಥಿಕ ಪ್ರಗತಿ ಪರಿಶೀಲನಾ ಸಭೆಯನ್ನು ದಿನಾಂಕ 10.06.2023ರಂದು ನಡೆಸಲಾಯಿತು. ಅತ್ಯುತ್ತಮ ಕಾರ್ಯನಿರ್ವಹಣೆಯ ಶಾಖೆಗಳಿಗೆ ಪುಷ್ಪಗುಚ್ಛ, ಸ್ಮರಣಿಕೆ ಮತ್ತು ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು. ವೈಯುಕ್ತಿಕ ವ್ಯವಹಾರದ ಗುರಿ ಸಾಧಿಸಿದ ಸಿಬ್ಬಂದಿಗಳಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಬ್ಯಾಂಕಿನ ಶೇರು ಬಂಡವಾಳ ಗುರಿ ತಲುಪಿದ ಶಾಖೆಯ ವ್ಯವಸ್ಥಾಪಕರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಗಿರಿಜಾ ಹೆಲ್ತ್ ಕೇರ್ ಮತ್ತು ಸರ್ಜಿಕಲ್ಸ್ ಇವರಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಸಿಬ್ಬಂದಿಗಳಿಗೆ ಆಯೋಜಿಸಲಾಗಿತ್ತು.
- 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ದಿನಾಂಕ 15.08.2023ರಂದು ಬ್ಯಾಂಕಿನಲ್ಲಿ ಧ್ವಜಾರೋಹಣ ಮಾಡುವ ಮೂಲಕ ಆಚರಿಸಲಾಯಿತು.
- ದಿನಾಂಕ 27.08.2023ರಂದು 2023–2028ನೇ ಸಾಲಿಗೆ ಬ್ಯಾಂಕಿನ ಆಡಳಿತ ಮಂಡಳಿಯ ಚುನಾವಣೆಯು ನಡೆದಿದ್ದು, ಈ ಚುನಾವಣೆಯಲ್ಲಿ ಬ್ಯಾಂಕಿನ 14 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಬ್ಯಾಂಕಿನ ಇತಿಹಾಸದಲ್ಲೇ ಇದು ಪ್ರಪ್ರಥಮ ಬಾರಿಯಾಗಿರುತ್ತದೆ.
- ದಿನಾಂಕ 28.08.2023ರಂದು ನಡೆದ ಪದಾಧಿಕಾರಿಗಳ ಚುನಾವಣೆಯಲ್ಲಿ ಶ್ರೀ ಅನಿಲ್ ಲೋಬೊ ಇವರು ಮುಂದಿನ ಐದು ವರ್ಷಗಳ ಅವಧಿಗೆ ಬ್ಯಾಂಕಿನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಶ್ರೀ ಜೆರಾಲ್ಡ್ ಜೂಡ್ ಡಿಸಿಲ್ವಾ ಇವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ.
- ದಿನಾಂಕ 09.09.2023ರಂದು ಬ್ಯಾಂಕಿನ ಅಶೋಕನಗರ ಶಾಖೆಯನ್ನು ಗ್ರಾಹಕರ ಅನುಕೂಲಕ್ಕಾಗಿ ಪಾರಿಜಾತ ಕಾಂಪ್ಲೆಕ್ಸ್, ಕವಿತಾ ರೆಸಿಡೆನ್ಸಿ ಹತ್ತಿರ, ಅಶೋಕನಗರ ಇಲ್ಲಿಗೆ ಸ್ಥಳಾಂತರಿಸಲಾಯಿತು.
- ಬ್ಯಾಂಕಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 24.09.2023ರಂದು ನಗರದ ಸಂತ ಅಲೋಶಿಯಸ್ ಪಿ.ಯು. ಕಾಲೇಜು ಲೊಯೊಲಾ ಹಾಲ್‌ನಲ್ಲಿ ನಡೆಸಲಾಯಿತು.
- ಬ್ಯಾಂಕಿನ ವ್ಯವಸ್ಥಾಪಕರು ಹಾಗೂ ಎಲ್ಲಾ ವರ್ಗದ ಸಿಬ್ಬಂದಿಗಳಿಗೆ ದಿನಾಂಕ 14.10.2023, 25.11.2023ರಂದು ಬ್ಯಾಂಕಿನ ಸಿಬಂದಿ ತರಬೇತಿ ಕೇಂದ್ರದಲ್ಲಿ ವಿವಿಧ ತರಬೇತಿಯನ್ನು ನೀಡಲಾಯಿತು.
- ಬ್ಯಾಂಕಿನ ವ್ಯವಸ್ಥಾಪಕರು ಹಾಗೂ ಎಲ್ಲಾ ವರ್ಗದ ಸಿಬ್ಬಂದಿಗಳಿಗೆ ದಿನಾಂಕ 28.10.2023ರಂದು ಉನ್ನತ ದರ್ಜೆಗೇರಿಸಿದ ಬ್ಯಾಂಕಿನ ಸಿಬಿಎಸ್ ಸೊಫ್ಟ್‌ವೇರ್ ಬಗ್ಗೆ ತರಬೇತಿಯನ್ನು ನೀಡಲಾಯಿತು.
- ದಿನಾಂಕ 20.11.2023ರಂದು ವಿಜಯಪುರ ಜಿಲ್ಲೆಯಲ್ಲಿ ನಡೆದ 70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷ ಶ್ರೀ ಅನಿಲ್ ಲೋಬೊ ಇವರಿಗೆ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇದು ಬ್ಯಾಂಕಿನ ಚರಿತ್ರೆಯಲ್ಲಿಯೇ ಸಹಕಾರ ರತ್ನ ಪಶಸ್ತಿ ಪಡೆದ ಪ್ರಪ್ರಥಮ ಅಧ್ಯಕ್ಷರು ಹಾಗೂ ಕ್ರೈಸ್ತ ಸಮುದಾಯದಲ್ಲಿ ಪ್ರಶಸ್ತಿ ಪಡೆದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.
- ದಿನಾಂಕ 09.12.2023ರಂದು ನಗರದ ಡೊರಿಸ್ ಸ್ಕೇ ಸಿಟಿಯಲ್ಲಿ ಬ್ಯಾಂಕಿನ ನಿರ್ದೇಶಕರು, ಸಿಬ್ಬಂದಿ ಹಾಗೂ ಅವರ ಕುಟುಂಬಸ್ಥರೊಂದಿಗೆ ಕ್ರಿಸ್‌ಮಸ್ ಸಂಭ್ರಮವನ್ನು ಆಚರಿಸಲಾಯಿತು.
- ಬ್ಯಾಂಕಿನ ವ್ಯವಹಾರವು ರೂ.1,000/– ಕೋಟಿ ದಾಟಿದ ಸಂದರ್ಭದಲ್ಲಿ ಮೈಲಿಗಲ್ಲು ಸಮಾರಂಭವನ್ನು ದಿನಾಂಕ 21.01.2024ರಂದು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಾನಸ ರಿಹ್ಯಾಬಿಲಿಟೇಶನ್ ಸೆಂಟರ್ ಪಾಂಬೂರ್, ಸುರಕ್ಷ ಚಾರಿಟೇಬಲ್ ಟ್ರಸ್ಟ್ ಕಾರ್ಕಳ ಮತ್ತು ಪ್ರಜ್ನ ಚಿನ್ನರ ತಂಗುದಾಣ ಕೇಂದ್ರ ಮಂಗಳೂರು ಈ ಸಂಸ್ಥೆಗಳಿಗೆ ಅವರು ನೀಡುವ ಉದಾತ್ತ ಸೇವೆಗೆ ದೇಣಿಗೆಯನ್ನು ನೀಡಲಾಯಿತು. ಮೈಲಿಗಲ್ಲು ಆಚರಣೆಯ ಸಂದರ್ಭದಲ್ಲಿ ಫೆಬ್ರವರಿ 1 ರಿಂದ ಮೇ 10 ರವರೆಗೆ ಗ್ರಾಹಕರಿಗೆ ವಿಶೇಷ ಕೊಡುಗೆಗಳನ್ನು ನೀಡುವ ಯೋಜನೆಯನ್ನು ಹಮ್ಮಿಕೊಳ್ಳಲಾಯಿತು.
- 26.01.2024ರಂದು ಬ್ಯಾಂಕಿನ ಸುರತ್ಕಲ್ ಶಾಖೆಯನ್ನು ಸುಸಜ್ಜಿತ ಸೌಲಭ್ಯದೊಂದಿಗೆ ಸುರತ್ಕಲ್ ಸರ್ವಿಸ್ ರಸ್ತೆಯ ಹತ್ತಿರ, ಲ್ಯಾಂಡ್ ಲಿಂಕ್ಸ್ ಪರ್ಲ್ ಕಟ್ಟಡದ ನೆಲಮಹಡಿಗೆ ಸ್ಥಳಾಂತರಿಸಿ, ಶಾಖೆಯ ಬೆಳ್ಳಿಹಬ್ಬವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕ್ ಶಾಖೆ ಆರಂಭವಾದಾಗಿನಿಂದ ಇತ್ತೀಚಿನವರೆಗೆ ಬ್ಯಾಂಕಿನೊಂದಿಗೆ ಇದ್ದ 25 ಗ್ರಾಹಕರನ್ನು ಸನ್ಮಾನಿಸಲಾಯಿತು.
- ಬ್ಯಾಂಕಿನ ತ್ರೈಮಾಸಿಕ ಆರ್ಥಿಕ ಪ್ರಗತಿ ಪರಿಶೀಲನಾ ಸಭೆಯನ್ನು ದಿನಾಂಕ 27.01.2024ರಂದು ನಡೆಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಠೇವಣಿ, ಸಾಲ, ಕಾಸಾ ಮತ್ತು ಎನ್‌ಪಿಎ ಬಗ್ಗೆ ಪರಿಶೀಲನೆ ನಡೆಸಲಾಯಿತು.

- ದಿನಾಂಕ 10.02.2024ರಂದು ಬ್ಯಾಂಕಿನ ವಿಷನ್ ಮತ್ತು ಮಿಶನ್ ಪರಿಶೀಲಿಸುವ ಬಗ್ಗೆ ಬ್ಯಾಂಕಿನ ಆಯ್ದ ಪ್ರಸ್ತುತ ನಿರ್ದೇಶಕರು, ಮಾಜಿ ನಿರ್ದೇಶಕರು, ಬ್ಯಾಂಕಿಂಗ್ ಪರಿಣಿತರು, ಗ್ರಾಹಕರು, ಉನ್ನತ ಸಿಬ್ಬಂದಿ ವರ್ಗ ಹೀಗೆ ಒಟ್ಟು 30 ಸದಸ್ಯರೊಂದಿಗೆ ಆರಂಭಿಕ ಸಭೆಯನ್ನು ನಡೆಸಲಾಯಿತು.
- 22 ವರ್ಷಗಳ ದೀರ್ಘ ಅವಧಿಯ ನಂತರ ಪ್ರಸ್ತುತ ಆಡಳಿತ ಮಂಡಳಿಯ ನೇತ್ರತ್ವದಲ್ಲಿ ಬ್ಯಾಂಕಿನ 17ನೇ ಶಾಖೆಯನ್ನು ಬ್ರಹ್ಮಾವರದಲ್ಲಿ 03.03.2024ರಂದು ಆರಂಭಿಸಲಾಯಿತು. ಅದಲ್ಲದೆ ಕಾವೂರ್, ಬೆಳ್ತಂಗಡಿ ಹಾಗೂ ಶಿವಮೊಗ್ಗದಲ್ಲಿ ಶಾಖೆಗಳನ್ನು ಆರಂಭಿಸಲು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅನುಮತಿಯನ್ನು ಪಡೆಯಲಾಯಿತು.
- 7 ಜಿಲ್ಲೆಗಳಿಗೆ ಸೀಮಿತವಾಗಿದ್ದ ಬ್ಯಾಂಕಿನ ಕಾರ್ಯವ್ಯಾಪ್ತಿಯನ್ನು ಇಡೀ ಕರ್ನಾಟಕಕ್ಕೆ ವಿಸ್ತರಿಸಲು ಭಾರತೀಯ ರಿಸರ್ವ್ ಬ್ಯಾಂಕ್ ನಮ್ಮ ಬ್ಯಾಂಕಿಗೆ ಅನುಮತಿಯನ್ನು ನೀಡಿರುತ್ತದೆ. ಇದರಿಂದ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಬ್ಯಾಂಕಿನ ಶಾಖೆಯನ್ನು ವಿಸ್ತರಿಸಲು ಸಾಧ್ಯವಾಗಿರುತ್ತದೆ.
- ಬ್ಯಾಂಕಿನ ಆಡಳಿತ ಕಛೇರಿಯ ಆವರಣದಲ್ಲಿ ಮಹಿಳಾ ಸಿಬ್ಬಂದಿಯವರ ನಿಸ್ವಾರ್ಥ ಸೇವೆಯನ್ನು ಗುರುತಿಸಿ ದಿನಾಂಕ 09.03.2024ರಂದು ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಹಿಳಾ ಶಾಖಾ ವ್ಯವಸ್ಥಾಪಕರು ಮತ್ತು ನಿರ್ದೇಶಕರನ್ನು ಶಾಲು ಹೊದಿಸಿ, ಪುಷ್ಪಗುಚ್ಛ ಹಾಗೂ ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು ಹಾಗೂ ಎಲ್ಲಾ ಮಹಿಳಾ ಸಿಬ್ಬಂದಿಯನ್ನು ಪುಷ್ಪಗುಚ್ಛ ನೀಡಿ ಗೌರವಿಸಲಾಯಿತು.
- ಬ್ಯಾಂಕಿನ ಗ್ರಾಹಕರಿಗೆ ಅವರ ಶುಭ ಕಾರ್ಯಗಳಲ್ಲಿ ಶುಭ ಹಾರೈಸಿ ಒಳಿತನ್ನು ಆಶಿಸುವ ಕಾರ್ಯವನ್ನು ಶಾಖೆಯ ವ್ಯವಸ್ಥಾಪಕರು ನಡೆಸಿಕೊಂಡು ಬರುತ್ತಾ ಇದ್ದಾರೆ. ಇದರಿಂದ ಬ್ಯಾಂಕಿನ ಗ್ರಾಹಕರು ಮತ್ತು ಸಿಬ್ಬಂದಿಯ ಮದ್ಯೆ ಉತ್ತಮ ಬಾಂಧವ್ಯವನ್ನು ಮೂಡಿಸಲು ಸಹಕಾರಿಯಾಗಿದೆ.
- ವರದಿ ವರ್ಷದಲ್ಲಿ 95 ಸಿಬ್ಬಂದಿಗಳು ಬ್ಯಾಂಕಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಎಲ್ಲಾ ಸಿಬ್ಬಂದಿ ವರ್ಗದವರಿಗೆ ಮತ್ತು ಅವರ ಕುಟುಂಬ ಸದಸ್ಯರಿಗೆ ಆರೋಗ್ಯ ವಿಮೆಯನ್ನು ತಲಾ ರೂ. 3,00,000/– ವರೆಗೆ ನೀಡಲಾಗಿದೆ ಹಾಗೂ ಸಿಬ್ಬಂದಿ ವರ್ಗದರಿಗೆ ಅಪಘಾತ ವಿಮೆಯನ್ನು ತಲಾ ರೂ. 5,00,000/–ವರೆಗೆ ಮಾಡಿಸಲಾಯಿತು.
- 24 ತಾಸುಗಳಲ್ಲಿ ವಾಹನ ಸಾಲ ನೀಡುವ ವ್ಯವಸ್ಥೆಯನ್ನು ಈ ವರ್ಷವೂ ಮುಂದುವರಿಸಲಾಗಿದೆ. ಎಲ್ಲಾ ಸಾಲಗಳನ್ನು ಇಎಮ್ಐ ಸೌಲಭ್ಯದಡಿ ನೀಡುವ ವ್ಯವಸ್ಥೆಯು ವರದಿ ವರ್ಷದಲ್ಲಿ ಮುಂದುವರಿಸಲಾಗಿದೆ. ಚಿನ್ನದ ಮೇಲಿನ ಸಾಲ, ಅಡಮಾನ ಸಾಲ, ವ್ಯಾಪಾರ ಹಾಗೂ ವಾಹನ ಸಾಲಗಳ ಮೇಲೆ ಸ್ಪರ್ಧಾತ್ಮಕ ಬಡ್ಡಿ ದರವನ್ನು ವಿಧಿಸಲಾಗುತ್ತಿದೆ.
- ವರದಿ ವರ್ಷದಲ್ಲಿ ಬ್ಯಾಂಕಿನ ಸದಸ್ಯರ ಮಕ್ಕಳಿಗೆ ಉನ್ನತ ವ್ಯಾಸಂಗಕ್ಕಾಗಿ ಶೇಕಡಾ 8.75 ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು ಹಮ್ಮಿಕೊಳ್ಳಲಾಯಿತು.
- ವರದಿ ವರ್ಷದಲ್ಲಿ ಬ್ಯಾಂಕಿನಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳನ್ನು ತೋರಿಸುವ ಬ್ಯಾಂಕಿನ ಎರಡು ಬುಲೆಟಿನ್‌ಗಳನ್ನು ಪ್ರಕಟಿಸಲಾಯಿತು.

ಬ್ಯಾಂಕಿನ ಅಭಿವೃದ್ದಿಗೆ ಸೂಕ್ತವಾದ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನವನ್ನು ಸೂಕ್ತ ಸಮಯದಲ್ಲಿ ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಿಗೆ, ಸಹಕಾರಿ ಇಲಾಖೆಯ ಅಧಿಕಾರಿಗಳಿಗೆ, ಅಂತರಿಕ ಲೆಕ್ಕ ಪರಿಶೋಧಕರಿಗೆ, ಶಾಸನಬದ್ದ ಲೆಕ್ಕಪರಿಶೋಧಕರಿಗೆ, ಕಾನೂನು ಸಲಹೆಗಾರರಿಗೆ, ಸ್ಥಿರಾಸ್ತಿ ಹಾಗೂ ವಾಹನ ಮೌಲ್ಯಮಾಪಕರುಗಳಿಗೆ ನಮ್ಮ ಹೃದಯಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ.

ಬ್ಯಾಂಕಿನ ಸರ್ವತೋಮುಖ ಅಭಿವೃದ್ದಿಗಾಗಿ ಶ್ರಮಿಸುತ್ತಿರುವ ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿ ವರ್ಗ, ಸಲಹೆಗಾರರು, ಠೇವಣಿದಾರರು, ಬ್ಯಾಂಕಿನ ಎಲ್ಲಾ ಗ್ರಾಹಕರಿಗೆ ಹಾಗೂ ಸದಸ್ಯರಿಗೆ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕಾರ ಸಲಹೆಗಳನ್ನು ನೀಡುತ್ತಿರುವ ಬ್ಯಾಂಕಿನ ಹಿತೈಷಿಗಳಿಗೆ ಹಾಗೂ ಹಿತಚಿಂತಕರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ. 112 ವರ್ಷಗಳನ್ನು ಪೂರೈಸುತ್ತಿರುವ ಈ ಬ್ಯಾಂಕು ಇನ್ನೂ ಉತ್ತುಂಗಕ್ಕೆ ಏರಿ, ಒಂದು ಮಾದರಿ ಬ್ಯಾಂಕ್ ಆಗಿ ಹೊರ ಹೊಮ್ಮಲಿ ಎಂದು ಶುಭ ಹಾರೈಸುತ್ತಾ, ಇದುವರೆಗೆ ನಮಗೆ ಸಂಪೂರ್ಣ ಸಹಕಾರ ನೀಡಿ ಬ್ಯಾಂಕಿನ ಏಳಿಗೆಗೆ ಕಾರಣೀಕರ್ತರಾದ ತಾವುಗಳು ಇನ್ನು ಮುಂದೆಯೂ ಬ್ಯಾಂಕನ್ನು ಪ್ರಗತಿ ಪಥದಲ್ಲಿ ಬೆಳೆಸಲು ಸಹಕಾರ ನೀಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ.

ಆಡಳಿತ ಮಂಡಳಿಯ ಪರವಾಗಿ,

**ಅನಿಲ್ ಲೋಬೊ,**

ಅಧ್ಯಕ್ಷರು

ಕಾರ್ಯಸೂಚಿ–4

# ಮಂಗಳೂರು ಕಥೋಲಿಕ್ ಕೊ–ಅಪರೇಟಿವ್ ಬ್ಯಾಂಕ್ (ನಿ),

ಆಡಳಿತ ಕಛೇರಿ : ಹಂಪನಕಟ್ಟ, ಮಂಗಳೂರು

**ದಿನಾಂಕ 01.04.2023 ರಿಂದ 31.03.2024ಕ್ಕೆ ಇದ್ದಂತೆ ಲಾಭ ಮತ್ತು ನಷ್ಟದ ತ:ಖ್ತೆ**

Profit and Loss Account for the period 01.04.2023 to 31.03.2024

| ದಿನಾಂಕ 31.03.2023ಕ್ಕೆ ಇದ್ದಂತೆ | ವೆಚ್ಚ ವಿವರಗಳು | 31.03.2024 ಮೊತ್ತ | ದಿನಾಂಕ 31.03.2023ಕ್ಕೆ ಇದ್ದಂತೆ | ಆದಾಯ ವಿವರಗಳು | 31.03.2024 ಮೊತ್ತ |
|---|---|---|---|---|---|
| 28,08,66,220.88 | ಠೇವಣಿ ಮತ್ತು ಸಾಲದ ಮೇಲಿನ ಬಡ್ಡಿ<br>Interest on Deposits, Borrowings, etc | 36,72,58,293.58 | 33,29,82,916.07 | ಸಾಲಗಳ ಮೇಲಿನ ಬಡ್ಡಿ<br>Interest received on loans | 40,21,00,987.37 |
| 5,15,32,264.52 | ಸಂಬಳ, ಭತ್ಯೆಗಳು ಮತ್ತು ಭವಿಷ್ಯ ನಿಧಿ<br>Salaries, Allowances & Provident Fund | 6,17,15,561.38 | 17,47,57,618.96 | ಹೂಡಿಕೆಗಳ ಮೇಲಿನ ಬಡ್ಡಿ<br>Interest on investments | 20,84,42,727.76 |
| 8,83,706.90 | ನಿರ್ದೇಶಕರ ಭತ್ಯೆಗಳು<br>Directors' Allowance & TA DA | 9,45,188.69 | 10,31,433.24 | ಕಮಿಷನ್, ವಿನಿಮಯ ಮತ್ತು ಬ್ರೋಕರೇಜ್<br>Commission and Brokerage | 5,65,107.38 |
| 1,83,10,353.11 | ಬಾಡಿಗೆ, ತೆರಿಗೆ, ವಿಮೆ, ವಿದ್ಯುತ್ ಖರ್ಚು<br>Rent, Taxes, Insurance, Lighting | 2,07,52,693.43 | 1,92,50,915.31 | ಇತರ ಆದಾಯ<br>Other Receipts | 2,66,74,832.03 |
| 11,79,550.00 | ಕಾನೂನು ವೆಚ್ಚ<br>Law Charges | 5,52,050.00 | | | |
| 23,79,735.22 | ಅಂಚೆ, ತಂತಿ, ದೂರವಾಣಿ ಖರ್ಚುಗಳು<br>Postage, Telegrams and telephone charges | 36,64,687.36 | | | |
| 49,050.00 | ಲೆಕ್ಕ ಪರಿಶೋಧನಾ ಶುಲ್ಕ<br>Audit Fees | 45,000.00 | | | |

| | | | | | |
|---|---|---|---|---|---|
| 1,60,06,228.43 | ದುರಸ್ತಿ ನವೀಕರಣ ಮತ್ತು ಸವಕಳಿ Repairs & Depreciation | 1,92,70,693.00 | | | |
| 28,56,351.26 | ಮುದ್ರಣ ಮತ್ತು ಲೇಖನ ಸಾಮಗ್ರಿ (Printing & Stationery) | 29,29,143.65 | | | |
| 25,61,513.58 | ಜಾಹಿರಾತು Advertisement | 26,07,919.79 | | | |
| 1,89,50,028.92 | ಇತರ ವೆಚ್ಚಗಳು / Other expenses | 2,51,30,246.21 | | | |
| 2,85,66,293.74 | ಹೊಣೆಗಾರಿಕೆ ನಿಬಂಧನೆಗಳು Provisions | 2,83,91,753.34 | | | |
| **10,38,81,587.02** | ತೆರಿಗೆ ನಂತರ ನಿವ್ವಳ ಲಾಭ **Net profit after Tax** | **10,45,20,424.11** | | | |
| **52,80,22,883.58** | **Total** | **63,77,83,654.54** | **52,80,22,883.58** | **Total** | **63,77,83,654.54** |

ಸಹಿ/–
**ಸುನಿಲ್ ಐ. ಮಿನೇಜಸ್**
ಪ್ರಭಾರ ಮಹಾಪ್ರಬಂಧಕರು

ಸಹಿ/–
**ಮೆಲ್ವಿನ್ ವಾಸ್**
ನಿರ್ದೇಶಕರು

ಸಹಿ/–
**ಜೆರಾಲ್ಡ್ ಜೂಡ್ ಡಿ'ಸಿಲ್ವಾ**
ಉಪಾಧ್ಯಕ್ಷರು

ಸಹಿ/–
**ಅನಿಲ್ ಲೋಬೊ**
ಅಧ್ಯಕ್ಷರು

**ಲಿಲಾಧರ್ ಮತ್ತು ಕಂ.**
**ಚಾರ್ಟರ್ಡ್ ಅಕೌಂಟೆಂಟ್ಸ್ FRN : 001861S**
**ಇವರ ಪರವಾಗಿ**

ಸ್ಥಳ: ಮಂಗಳೂರು
ದಿನಾಂಕ: 19–06–2024

**ಸಹಿ/–**
**(ಲಕ್ಷೀಶ ಎನ್. – ಪಾಲುದಾರ) Member No. 026873**
**UDIN : 24026873BKEOGW6514**

- 2020–21 ಒದ ಲಾಭಾಂಶವನ್ನು (ಡಿವಿಡೆಂಡ್) ಪಡೆಯದ ಸದಸ್ಯರು ತಮ್ಮ ಹತ್ತಿರದ ಶಾಖೆಗಳನ್ನು ಅಥವಾ ಪ್ರಧಾನ ಕಛೇರಿಯನ್ನು ಸಂಪರ್ಕಿಸಿ ಪಡೆಯಬೇಕಾಗಿ ವಿನಂತಿ. ಲಾಭಾಂಶವನ್ನು ಘೋಷಿಸಿದ ತಾರೀಕಿನಿಂದ 3 ವರ್ಷದ ಒಳಗಾಗಿ ಸದಸ್ಯರು ಲಾಭಾಂಶವನ್ನು (ಡಿವಿಡೆಂಡ್) ಪಡೆಯದೇ ಇದ್ದಲ್ಲಿ ನಿಯಮಗಳಿಗನುಸಾರವಾಗಿ ಅಂತಹ ಮೊಬಲಗನ್ನು ಮೀಸಲು ನಿಧಿಗೆ (ರಿಸರ್ವ್ ಫಂಡ್) ಜಮಾ ಮಾಡಲಾಗುವುದು. ಅದ್ದರಿಂದ ಸದಸ್ಯರು ಡಿವಿಡೆಂಡ್ ಪಡೆಯಲು ಇದೇ ಅಂತಿಮ ನೋಟಿಸು ಎಂದು ಪರಿಗಣಿಸುವುದು. ಈ ಬಗ್ಗೆ ಸದಸ್ಯರಿಗೆ ಪ್ರತ್ಯೇಕ ನೋಟಿಸು ಕಳುಹಿಸಲಾಗುವುದಿಲ್ಲ.
- ಭಾರತೀಯ ರಿಜರ್ವ್ ಬ್ಯಾಂಕಿನ ಆದೇಶದನ್ವಯ ಬ್ಯಾಂಕಿನಲ್ಲಿ ಹೊಂದಿದ 10 ವರ್ಷ ಮತ್ತು ಮೇಲ್ಪಟ್ಟು ಅವಧಿಯವರೆಗೆ ವ್ಯವಹಾರ ನಡೆಸದೇ ಇರುವ (in operative account) ಎಲ್ಲಾ ಠೇವಣಿಗಳನ್ನು ಡಿಪಾಜಿಟ್ ಎಜ್ಯುಕೇಶನ್ ಅವೇರ್‌ನೆಸ್ ಸ್ಕೀಮ್ 2014ರನ್ವಯ ಭಾರತೀಯ ರಿಜರ್ವ್ ಬ್ಯಾಂಕಿಗೆ ಪ್ರತಿ ತಿಂಗಳು ವರ್ಗಾಯಿಸಬೇಕಾಗುತ್ತದೆ. ಆದುದರಿಂದ ಎಲ್ಲಾ ಗ್ರಾಹಕರು ತಮ್ಮ ಎಲ್ಲಾ ಠೇವಣಿಗಳು ಚಾಲ್ತಿ ಇರುವಂತೆ ನೋಡಿಕೊಳ್ಳಬೇಕು.

ಕಾರ್ಯಸೂಚಿ–4

# ಮಂಗಳೂರು ಕಥೋಲಿಕ್ ಕೊ–ಅಪರೇಟಿವ್ ಬ್ಯಾಂಕ್ (ನಿ)

**ಆಡಳಿತ ಕಛೇರಿ : ಹಂಪನಕಟ್ಟ, ಮಂಗಳೂರು**

**ದಿನಾಂಕ 31.03.2024ಕ್ಕೆ ಇದ್ದಂತೆ ಆಸ್ತಿ ಮತ್ತು ಹೊಣೆಗಾರಿಕೆ ತ:ಖ್ತೆ** Balance Sheet as on **31.03.2024**

| ಹಿಂದಿನ ಸಾಲಿನ ಮೊಬಲಗು | ಜವಬ್ದಾರಿಗಳು (Liabilities) ವಿವರಗಳು | ಪ್ರಸಕ್ತ ಸಾಲಿನ ಮೊಬಲಗು | ಹಿಂದಿನ ಸಾಲಿನ ಮೊಬಲಗು | ಆಸ್ತಿಗಳು **(Assets)** ವಿವರಗಳು | ಪ್ರಸಕ್ತ ಸಾಲಿನ ಮೊಬಲಗು |
|---|---|---|---|---|---|
| 27,36,14,700.00 | ಪಾಲು ಬಂಡವಾಳ (Share Capital) | 31,20,82,800.00 | | **ನಗದು (Cash & Bank Balance)** | |
| | | | 99,85,594.00 | ಕೈಯಲ್ಲಿರುವ ನಗದು (Cash in Hand) | 1,09,76,691.00 |
| 64,18,84,662.26 | ಮೀಸಲು ನಿಧಿ ಮತ್ತು ಇತರ ನಿಧಿಗಳು (Reserve Fund & Other Reserves) | 71,99,76,043.51 | 85,64,600.00 | ಎಟಿಎಮ್‌ನಲ್ಲಿರುವ ನಗದು (Cash at ATM) | 53,12,700 .00 |
| | | | 24,24,57,217.26 | ಇತರ ಬ್ಯಾಂಕುಗಳಲ್ಲಿರುವ ನಗದು (Cash at other banks) | 29,00,95,368.12 |
| | **ಠೇವಣಿಗಳು** Deposits | | | ಇತರ ಬ್ಯಾಂಕುಗಳಲ್ಲಿರುವ ಶಿಲ್ಕು **Balance with other Banks** | |
| 4,70,46,56,357.90 | ನಿರಖು ಠೇವಣಿಗಳು Fixed deposits | 5,11,80,56,832.70 | 14,01,771.20 | ಚಾಲ್ತಿ ಖಾತೆಗಳು (Current Accounts) | 22,69,372.22 |
| 1,01,98,77,181.85 | ಉಳಿತಾಯ ಠೇವಣಿ Saving Deposits | 1,15,58,48,137.44 | 67,51,99,900.87 | ನಿರಖು ಠೇವಣಿಗಳು (Fixed Deposits) | 61,97,99,900.87 |
| 5,49,57,139.67 | ಚಾಲ್ತಿ ಖಾತೆಗಳು Current Deposits | 8,31,07,698.07 | | | |
| | | | | **Investments** | |
| | | | 1,82,42,40,765.00 | ಹೂಡಿಕೆಗಳು SLR Investments | 1,72,31,34,745.00 |
| | | | 26,30,21,850.62 | ಹೂಡಿಕೆಗಳು Non SLR Investments | 11,00,29,500.25 |
| | | | | ಸಾಲ – ಮುಂಗಡಗಳು **Loans & Advances** | |
| | | | 82,67,40,596.82 | ಅಲ್ಪಾವಧಿ ಸಾಲಗಳು Short Term Loans & Advances | 89,74,39,916.25 |
| 1,08,61,69,026.73 | ಸುಸ್ತಿ ಸಾಲಗಳ ಬಡ್ಡಿ ಮೀಸಲು Overdue Interest Reserve Account | 1,22,82,94,808.96 | 8,96,03,696.66 | ಮಧ್ಯಮಾವಧಿ ಸಾಲಗಳು Medium Term Loans | 7,72,24,821.36 |

| | | | | | |
|---|---|---|---|---|---|
| 81,26,618.14 | ಸಾಲಗಳ ಇತರ ಶುಲ್ಕಗಳ ಮೀಸಲು Loan charges receivable A/c | 99,45,564.96 | 2,63,66,98,734.66 | ದೀರ್ಘಾವಧಿ ಸಾಲಗಳು Long term Loans | 3,47,41,65,646.26 |
| 32,83,665.00 | ಠೇವಣಿಗಳಿಗೆ ಬಡ್ಡಿ ಕಾದಿರಿಸಿದ್ದು Interest Payable | 61,70,403.00 | | ಬರತಕ್ಕ ಬಡ್ಡಿಗಳು Interest receiveable | |
| | | | 1,08,61,69,026.73 | ಸಾಲಗಳ ಮೇಲೆ ಬರತಕ್ಕ ಬಡ್ಡಿಗಳು Interest Receivable on loans | 1,22,82,94,808.96 |
| 4,09,04,381.37 | ಇತರ ಜವಾಬ್ದಾರಿಗಳು Other Liabilities | 2,97,21,385.37 | 81,26,618.14 | ಸಾಲಗಳ ಮೇಲೆ ಬರತಕ್ಕ ಇತರ ಖರ್ಚು Loan Other Charges Receivable | 99,45,564.96 |
| | | | 3,80,00,622.03 | ಪ್ರಮಾಣಿತ ಸಾಲಗಳ ಮೇಲೆ ಬರತಕ್ಕ ಬಡ್ಡಿಗಳು Interest Receivable standard | 6,77,89,858.40 |
| 10,38,81,587.02 | ಲಾಭ ಮತ್ತು ನಷ್ಟ ಖಾತೆ Profit and loss account | 10,45,20,424.11 | 3,26,40,233.99 | ಹೂಡಿಕೆಗಳ ಮೇಲೆ ಬರತಕ್ಕ ಬಡ್ಡಿಗಳು Interest Receivable on Investments | 3,17,85,125.55 |
| | | | 16,56,12,006.94 | Fixed Assets | 17,52,27,351.20 |
| | | | 21,80,993.92 | ಅಂತರ ಶಾಖಾ ಹೊಂದಾಣಿಕೆಗಳು Inter branch adjustments | 19,00,081.70 |
| | | | 2,67,11,091.10 | ಇತರ ಆಸ್ತಿಗಳು Other assets | 4,23,32,646.02 |
| **7,93,73,55,319.94** | **ಒಟ್ಟು ಮೊತ್ತ** | **8,76,77,24,098.12** | **7,93,73,55,319.94** | **ಒಟ್ಟು ಮೊತ್ತ** | **8,76,77,24,098.12** |
| 46,95,870.00 | Contigent Liabilities | 81,86,092.75 | | | |

| ಸಹಿ/– | ಸಹಿ/– | ಸಹಿ/– | ಸಹಿ/– |
|---|---|---|---|
| **ಸುನಿಲ್ ಐ. ಮಿನೇಜಸ್** | **ಮೆಲ್ವಿನ್ ವಾಸ್** | **ಜೆರಾಲ್ಡ್ ಜೂಡ್ ಡಿ'ಸಿಲ್ವಾ** | **ಅನಿಲ್ ಲೋಬೊ** |
| ಪ್ರಭಾರ ಮಹಾಪ್ರಬಂಧಕರು | ನಿರ್ದೇಶಕರು | ಉಪಾಧ್ಯಕ್ಷರು | ಅಧ್ಯಕ್ಷರು |

ನಾನು ಮಂಗಳೂರು ಕಥೋಲಿಕ್ ಕೊ–ಅಪರೇಟಿವ್ ಬ್ಯಾಂಕ್ ನಿಯಮಿತ, ಮಂಗಳೂರು ಇದರ 2023–24ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇನೆ. ನನ್ನ ತಿಳುವಳಿಕೆ ಹಾಗೂ ನಂಬಿಕೆಯ ಪ್ರಕಾರ ಲೆಕ್ಕ ಪರಿಶೋಧನೆಗೆ ಅಗತ್ಯವೆಂದು ಕಂಡುಬಂದ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ಪಡೆದಿದ್ದು ಅವುಗಳು ತೃಪ್ತಿಕರವೆಂದು ಕಂಡುಬಂದಿರುತ್ತದೆ. ನನ್ನ ಅಭಿಪ್ರಾಯ ಮತ್ತು ನಾನು ಪಡೆದಂತಹ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ ಲಗ್ತೀಕರಿಸಿದ ನನ್ನ ನಿಖರವಾದ ಲೆಕ್ಕ ಪರಿಶೋಧನಾ ವರದಿಗೆ ಒಳಪಟ್ಟು ಬ್ಯಾಂಕಿನ ಲಾಭ–ನಷ್ಟದ ತ:ಖ್ತೆ ಹಾಗೂ ಆಸ್ತಿ ಹೊಣೆಗಾರಿಕೆ ತ:ಖ್ತೆಯು ದಿನಾಂಕ 31.03.2024ರಲ್ಲಿದ್ದಂತೆ ಬ್ಯಾಂಕಿನ ನೈಜ ಹಾಗೂ ಸಮಂಜಸ ಆರ್ಥಿಕ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ ಎಂದು ದೃಢೀಕರಿಸುತ್ತೇನೆ.

**ಲಿಲಾಧರ್ ಮತ್ತು ಕಂ.**
**ಚಾರ್ಟರ್ಡ್ ಅಕೌಂಟೆಂಟ್ಸ್ FRN : 001861S**
**ಇವರ ಪರವಾಗಿ**
**ಸಹಿ/–**
**(ಲಕ್ಷೀಶ ಎನ್. – ಪಾಲುದಾರ) Member No. 026873**
UDIN: 24026873BKEOGW6514

ಸ್ಥಳ: ಮಂಗಳೂರು
ದಿನಾಂಕ: 19–06–2024

# Notes on Accounts of balance sheet as on 31-03-2024

| Particulars | 31.03.2024 | 31.03.2023 |
|---|---|---|
| 1. Capital to Risk Weight Asset Ratio (CRAR | 23.06% | 20.45% |

2. Movement of CRAR (In Lakhs)

| | | |
|---|---|---|
| Tier I Capital | 7933.60 | 6774.77 |
| Tier II Capital | 865.64 | 987.66 |
| Total Capital | 8799.24 | 77762.43 |
| Total Risk Weighted Assets | 38163.23 | 36032.35 |

3. Investments:

| | | |
|---|---|---|
| a. Book Value of Investments | 17231.34 | 20872.63 |
| b. Face Value of Investments | 17447.10 | 21077.32 |
| c. Market Value of Investments | 17517.30 | 20985.93 |

d. Details of issuer composition of non –SLR investments and non performing non SLR Investments

*Issuer composition of non-SLR Investments

| No. | Issuer | Amount (in lakhs) | Extent of 'below investment grade securities' | Extent of 'Unrated Securities' | Extent of 'unlisted Securities' |
|---|---|---|---|---|---|
| 1 | PSUs | 0.00 | 0 | 0 | 0 |
| 2 | FIs | 0.30 | 0 | 0 | 0 |
| 3 | Public Sector Banks | 0.00 | 0 | 0 | 0 |
| 4 | Mutual Fund | 1099.95 | 0 | 0 | 0 |
| 5 | Others | 0.00 | 0 | 0 | 0 |
| 6 | Provision held towards depreciation | | 0 | 0 | 0 |

*** Non performing non-SLR investments**

| Particulars | Amount (in lakhs) |
|---|---|
| Opening Balance | 0 |
| Additions during the year since 1st April | 0 |
| Reduction during the above period | 0 |
| Closing balance | 0 |
| Total provisions held | 0 |

4. **Advances against** (in lakhs)

| Particulars | 31.03.2024 | 31.03.2023 |
|---|---|---|
| Real Estate | 0 | 0.00 |
| Construction and Business | 111.03 | 113.26 |
| Housing | 7690.56 | 7069.77 |

5. Advances against shares and debentures : 0

6. Advances to Director's, their relatives, Companies / Firms in which they are interested:

| | | |
|---|---|---|
| a. Fund Based | 0 | 0.95 |
| b. Non fund based | 0 | 0.00 |

| Particulars | 31.03.2024 | 31.03.2023 |
|---|---|---|
| 7. Cost of Deposits (average) | 6.19% | 5.25% |

8. NPAs (in lakhs)

| | | |
|---|---|---|
| a. Gross NPAs | 2208.64 | 2193.86 |
| b. Net NPA | 478.30 | 463.51 |

**9. Movement of NPAs, increase/(Decrease**) (in lakhs)

| | | |
|---|---|---|
| Gross NPAs | 14.78 | -35.77 |
| Net NPAs | 14.78 | -35.77 |

**10. Profitability**

| | | |
|---|---|---|
| a. Interest income as a percentage of working funds | 7.60% | 6.90% |
| b. Non-interest income as a percentage of working funds | 0.87% | 0.82% |
| c. Operating profit as a percentage of working funds | 1.66% | 2.04% |
| d. Return on Assets | 1.39% | 1.52% |
| e. Business (Deposits + Advances) per employee (in lakhs) | 1137.46 | 888.81 |
| f. Profit per employee (in lakhs) | 11.00 | 9.89 |

11. Provisions made towards NPAs, depreciation in investments, standard assets (in lakhs)

| | | |
|---|---|---|
| NPAs | 1730.34 | 1730.34 |
| Depreciation in investments | 0 | 11.78 |
| Standard assets | 148.90 | 133.22 |

12. **Movement in provisions**: (increase/(decrease)

(in lakhs)

| | | |
|---|---|---|
| NPAs | 0 | 0 |
| Depreciation in investments | 0 | 0 |
| Standard assets | 15.68 | 0.25 |

13. Foreign Currency assets & liabilities (if applicable) : NIL

| | | |
|---|---|---|
| 14. Payment of DICGC Insurance premium | 87.94 | 78.65 |
| Arrears | 0 | 0 |

Insurance premium has been paid up to date to DICGC, no arrears.

15. Penalty imposed by RBI : NIL

16. Restructured accounts : Nil

17. Provision for Restructured accounts : Nil

17. Fixed Assets – Valuation / Revaluation : 1200 (in lakhs)

18. DEAF (Depositors' Education and Awareness Fund) 2014 Accounts: (in lakhs)

| | | |
|---|---|---|
| Opening balance of amounts transferred to DEAF | 46.96 | 46.16 |
| Add : Amount transferred to DEAF during the year | 34.90 | 0.80 |
| Less : Amount reimbursed by DEAF to claim | 0.00 | 0.00 |
| Closing balance of amounts transferred to DEAF | 0.00 | 0.00 |
| Closing balance of DEAF at RBI | 81.86 | 46.96 |
| Claims receivable | 0.00 | 0.00 |

**ಕಾರ್ಯಸೂಚಿ–5**

## ಮಂಗಳೂರು ಕಥೋಲಿಕ್ ಕೊ–ಅಪರೇಟಿವ್ ಬ್ಯಾಂಕ್ ಲಿಮಿಟೆಡ್, ಮಂಗಳೂರು, ದ.ಕ.
## 2023–24ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಆಡಳಿತ ಮಂಡಲಿಯ ಅನುಪಾಲನಾ ವರದಿ.

1. ಅಸ್ತಿತ್ವದಲ್ಲಿರುವ ಗ್ರಾಹಕರಿಗೆ ಎರಡನೇ ಗ್ರಾಹಕ ಕೋಡನ್ನು ತೆರೆಯದಂತೆ ಎಚ್ಚರಿಕೆ ಹಾಗೂ ಶಾಖೆಗಳಲ್ಲಿ ಬಡ್ಡಿ ದರಗಳನ್ನು ಮಾರ್ಪಡಿಸುವ/ಬದಲಾಯಿಸುವ (Modify/alter) ಮೊದಲು ಮೇಲಾಧಿಕಾರಿಯವ ಅಧಿಕಾರ ಪಡೆಯುವಂತೆ ಬ್ಯಾಂಕಿನ ತಂತ್ರಾಂಶದಲ್ಲಿ ಅಳವಡಿಕೆ ಮಾಡಿಕೊಳ್ಳುವುದು.

   **ಅನುಪಾಲನ ವರದಿ :** ಈ ಬಗ್ಗೆ ಈಗಾಗಲೇ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

2. ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ 2014 ರ ಕಲಂ 18(1) ರನ್ವಯ ಸಂಘದಲ್ಲಿರುವ ಸಹಸದಸ್ಯರುಗಳ ಸಂಖ್ಯೆಯು ಒಟ್ಟು ಕ್ರಮಬದ್ಧ ಸದಸ್ಯತ್ವದ ಪ್ರತಿಶತ ಹದಿನೈದರಷ್ಟನ್ನು ಮೀರತಕ್ಕದ್ದಲ್ಲ. ವರದಿ ವರ್ಷದಲ್ಲಿ ಒಟ್ಟು ಕ್ರಮಬದ್ದ ಸದಸದಸ್ಯತ್ವದ ಪ್ರತಿಶತ 15.93 ಇದ್ದು, ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ 2014ರ ಕಲಂ 18(1) ರನ್ವಯ ಕ್ರಮ ಕೈಗೊಳ್ಳುವುದು.

   **ಅನುಪಾಲನ ವರದಿ :** ಸದಸ್ಯತ್ವವನ್ನು ನಿಗದಿತ ಮಿತಿಯಲ್ಲಿ ಇಡಲು ಕ್ರಮ ಕೈಗೊಳ್ಳಲಾಗುವುದು.

3. ಅವಧಿ ಮುಗಿದ ಕೈವೈಸಿಯನ್ನು ನವೀಕರಣ ಮಾಡಲು ಬಾಕಿ ಇರುತ್ತದೆ.
   **ಅನುಪಾಲನ ವರದಿ :** ಅವಧಿ ಮುಗಿದ ಕೈವೈಸಿಯನ್ನು ನವೀಕರಣ ಮಾಡಲು ಶಾಖೆಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

4. ಕೆಲವೊಂದು ಸದಸ್ಯರು ಹಾಲಿ ಹೊಂದಿರುವ ಷೇರು ಹಣ ಮೊತ್ತ ರೂ.100/– ಹಾಗೂ ರೂ.500/– ಆಗಿದ್ದು, ಸದಸ್ಯತ್ವದ ಷೇರು ಹಣ ರೂ.1,000/– ಪಾವತಿಸಬೇಕಾಗಿದೆ. ಅದ್ದರಿಂದ ವ್ಯತ್ಯಾಸದ ಮೊಬಲಗನ್ನು ಬ್ಯಾಂಕಿಗೆ ಪಾವತಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

   **ಅನುಪಾಲನ ವರದಿ :** ಸದಸ್ಯತ್ವದ ಪೂರ್ತಿ ಷೇರು ಹಣ ಪಾವತಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

5. ಠೇವಣಿ ಖಾತೆಗಳ ನಿರ್ವಹಣೆ ಕುರಿತು ಆರ್.ಬಿ.ಐ. ಮಾಸ್ಟರ್ ಸುತ್ತೋಲೆ – ಪ್ರಾಥಮಿಕ (ನಗರ) ಸಹಕಾರಿ ಬ್ಯಾಂಕುಗಳು ಸಂಖ್ಯೆ (RB/2015–16–5DCBR,BPD(PCB), MCNo.6/13–01/00/2015–16) ಸ್ಪಷ್ಟವಾಗಿ ಹೀಗೆ ಹೇಳುತ್ತದೆ. : ಪ್ರಾಥಮಿಕ (ನಗರ) ಸಹಕಾರಿ ಬ್ಯಾಂಕುಗಳು ಅಸ್ತಿತ್ವದಲ್ಲಿರುವ ನಿವಾಸಿ, ಖಾತೆದಾರರು ಅನಿವಾಸಿಗಳಾದಾಗ ಅಂತಹ ಖಾತೆಗಳನ್ನು ಮರುವರ್ಗೀಕರಣ ಮಾಡಿ ಅನಿವಾಸಿ ಸಾಮಾನ್ಯ (NRO) ಖಾತೆಗಳಾಗಿ ಪರಿವರ್ತಿಸಿದ್ದಲ್ಲಿ ಅಂತಹ ಖಾತೆಗಳಿಗೆ ಮಾತ್ರ ನಿಯತಕಾಲಿಕ ಬಡ್ಡಿಯನ್ನು ನೀಡಲು ಅನುಮತಿ ನೀಡಲಾಗಿರುತ್ತದೆ. ಪ್ರಾಥಮಿಕ (ನಗರ) ಸಹಕಾರಿ ಬ್ಯಾಂಕುಗಳಿಗೆ ಅನಿವಾಸಿ ಸಾಮಾನ್ಯ (NRO) ಖಾತೆಗಳನ್ನು ತೆರೆಯಲು (ವರ್ಗ ಎ ಅಧಿಕೃತ ವಿತರಕರನ್ನು ಹೊರತುಪಡಿಸಿ) ನಿಷೇಧಿಸಿದೆ. ಆದಾಗ್ಯೂ ವರದಿ ಸಾಲಿನಲ್ಲಿ ಬ್ಯಾಂಕು ಯಾವುದೇ (NRO) ಖಾತೆಗಳನ್ನು ತೆರೆಯದಿದ್ದರೂ ಅದು ಹಿಂದಿನ ವರ್ಷಗಳಲ್ಲಿ ತೆರೆದಂತಹ ಖಾತೆಗಳನ್ನು ಮುಂದುವರಿಸಿದೆ. ಇದು ಆರ್.ಬಿ.ಐ. ಮಾರ್ಗಸೂಚಿಗಳನ್ನು ಉಲ್ಲಂಘಿಸಿದಂತೆ ಆಗುತ್ತದೆ.

   **ಅನುಪಾಲನ ವರದಿ :** ಬ್ಯಾಂಕಿನಲ್ಲಿರುವ ಹತ್ತು ವರ್ಷಗಳ ಹಿಂದಿನ ನಿಷ್ಕ್ರಿಯ ಎನ್‌ಆರ್‌ಓ ಖಾತೆಗಳಾಗಿದ್ದು, ಸದ್ರಿ ಖಾತೆಗಳನ್ನು ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

6. ನಗದು ಉದ್ದರಿ ಸಾಲಗಳನ್ನು ನವೀಕರಣ ಮಾಡುವ ಸಂದರ್ಭಗಳಲ್ಲಿ ಲೆಕ್ಕ ಪರಿಶೋಧಿತ ಹಣಕಾಸು ತ:ಖ್ತೆಗಳನ್ನು ಕಡ್ಡಾಯವಾಗಿ ಪಡೆದುಕೊಳ್ಳಲು ಕ್ರಮ ಕೈಗೊಳ್ಳುವುದು.

   **ಅನುಪಾಲನ ವರದಿ :** ಈ ಬಗ್ಗೆ ಶಾಖೆಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

8. ವರ್ಷಾಂತ್ಯಕ್ಕೆ ಷೇರು ಸಸ್ಪೆನ್ಸ್ ಖಾತೆಯಲ್ಲಿ ಬಾಕಿ ಮೊತ್ತ ರೂ.12,23,705.00 ಇದ್ದು, ಇದನ್ನು ಹೊಂದಾಣಿಕೆ ಮಾಡಲು ಬಾಕಿ ಇರುತ್ತದೆ.

   **ಅನುಪಾಲನ ವರದಿ :** ಷೇರು ಸಸ್ಪೆನ್ಸ್ ಖಾತೆಯಲ್ಲಿ ಇರುವ ಮೊತ್ತವು ಸದಸ್ಯರು ಸಾಲವನ್ನು ಕೋರಿ ಸಲ್ಲಿಸಿದ ಅರ್ಜಿಗೆ ಷೇರು ಜೋಡನೆ ಮೊತ್ತವಾಗಿದ್ದು ಸದ್ರಿ ಮೊತ್ತವನ್ನು ಸಾಲವನ್ನು ಪಡೆದ ಸದಸ್ಯರ ಖಾತೆಗೆ ಎಪ್ರಿಲ್ ತಿಂಗಳಲ್ಲಿ ಜಮಾ ಮಾಡಲಾಗಿದೆ.

**ಮಹಾಪ್ರಬಂಧಕರು (ಪ್ರ)**

**ಕಾರ್ಯಸೂಚಿ–6**

# ಮಂಗಳೂರು ಕಥೋಲಿಕ್ ಕೊ–ಅಪರೇಟಿವ್ ಬ್ಯಾಂಕ್ ಲಿಮಿಟೆಡ್, ಮಂಗಳೂರು, ದ.ಕ.
# 2024–25ನೇ ವರ್ಷದ ಕಾರ್ಯಕ್ರಮ

1. ಸದಸ್ಯರು ರೂ. 11.90 ಕೋಟಿವರೆಗೆ ಭದ್ರತಾ ಸಾಲಗಳನ್ನು ಅಥವಾ ನಿಗದಿತ ಮಿತಿಯೊಳಗೆ ಹೆಚ್ಚುವರಿ ಭದ್ರತಾ ಸಾಲಗಳನ್ನು ಅವಶ್ಯಕತೆಗಳಿಗನುಗುಣವಾಗಿ ಪಡೆಯಬಹುದು.
2. ಆಭರಣ ಸಾಲವನ್ನು ಸದಸ್ಯರಿಗೆ ರೂ.1.00 ಕೋಟಿವರೆಗೆ ನೀಡಲಾಗುವುದು.
3. ಸದಸ್ಯರ ಮಕ್ಕಳ ಉನ್ನತ ವ್ಯಾಸಂಗಕ್ಕಾಗಿ ಆಕರ್ಷಕ ಬಡ್ಡಿ ದರದಲ್ಲಿ ಸಾಲವನ್ನು ನೀಡಲಾಗುವ ಯೋಜನೆಯನ್ನು ಮುಂದುವರಿಸಲಾಗುವುದು.
4. ಸದಸ್ಯರಿಗೆ ಹೊಸ ವಾಹನಗಳನ್ನು ಖರೀದಿಸಲು ವಾಹನ ಸಾಲವನ್ನು ಖರೀದಿ ಕ್ರಯದ ಶೇಕಡಾ 85ರಷ್ಟು ನೀಡಲಾಗುವುದು. ಸಾಲ ಮರುಪಾವತಿ ಮಾಡಲು ಗರಿಷ್ಠ 84 ತಿಂಗಳ ಕಾಲಾವಧಿಯನ್ನು ನೀಡಲಾಗುತ್ತದೆ.
5. ಮನೆ ಕಟ್ಟಡ ನಿರ್ಮಾಣ ಹಾಗೂ ಖರೀದಿಗೆ ಆಕರ್ಷಕ ಬಡ್ಡಿ ದರದಲ್ಲಿ ಸಾಲ ಮರುಪಾವತಿ ಮಾಡಲು ಗರಿಷ್ಠ 20 ವರ್ಷಗಳ ಕಾಲಾವಧಿಯನ್ನು ನೀಡಲಾಗುವುದು.
6. ಠೇವಣಿ ಸಂಗ್ರಹಣೆ ಹಾಗೂ ಸಾಲ ನಿರ್ವಹಣೆಗಳೊಂದಿಗೆ ಬ್ಯಾಂಕಿನ ಸೇವೆಗಳ ಕುರಿತು ಬ್ಯಾಂಕಿನ ಸಿಬ್ಬಂದಿಗಳಿಗೆ ಹಂತ ಹಂತವಾಗಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.
7. ಯುಪಿಐ, ಗೂಗಲ್ ಪೇ ಅಂತಹ ಡಿಜಿಟಲ್ ಸೇವೆಯನ್ನು ಪ್ರಾರಂಭಿಸುವುದು.
8. ಗ್ರಾಹಕರ ಸಮಾವೇಶವನ್ನು ನಡೆಸುವುದು.
9. ಬ್ಯಾಂಕಿನ ಶಾಖೆಗಳಿಗೆ ಸ್ವಂತ ಕಟ್ಟಡ ಖರೀದಿಸುವುದು.
10. ಹೊಸ ಶಾಖೆಗಳನ್ನು ತೆರೆಯುವುದು.
11. ಗ್ರಾಹಕರ ಅನುಕೂಲತೆಗಾಗಿ ಶಾಖೆಗಳ ಸ್ಥಳಾಂತರ.

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

ಮಂಗಳೂರು
25–07–2024

**ಮಹಾಪ್ರಬಂಧಕರು (ಪ್ರ)**

**ಕಾರ್ಯಸೂಚಿ–7**

## ಬಜೆಟಿನ ಮಿತಿಗಿಂತ ಮೀರಿದ ವೆಚ್ಚಗಳ ಮಂಜೂರಾತಿ

| | | ಅಂದಾಜು<br>ರೂ. ಪೈ. | ವ್ಯಯವಾದದ್ದು<br>ರೂ. ಪೈ. | ಹೆಚ್ಚುವರಿ<br>ರೂ. ಪೈ. |
|---|---|---|---|---|
| 1 | ಠೇವಣಿಗಳ ಮೇಲಿನ ಬಡ್ಡಿ | 31,00,00,000.00 | 36,72,58,293.58 | 5,72,58,293.58 |
| 2 | ಬಾಡಿಗೆ, ತೆರಿಗೆ, ವಿಮಾ ಕಂತು, ವಿದ್ಯುಚ್ಛಕ್ತಿ, | 1,95,00,000.00 | 2,07,52,693.43 | 12,52,693.43 |
| 3 | ಅಂಚೆ, ತಂತಿ ಮತ್ತು ದೂರವಾಣಿ | 28,00,000.00 | 36,64,687.36 | 8,64,687.36 |
| 4 | ಜಾಹೀರಾತು ವೆಚ್ಚ | 25,00,000.00 | 26,07,919.79 | 1,07,919.79 |
| 5 | ಸಾದಿಲ್ವಾರು ವೆಚ್ಚ | 1,25,00,000.00 | 1,93,59,649.95 | 68,59,541.25 |
| 6 | ಸಹಕಾರ ನಿಧಿ ಕಮಿಷನ್ | 42,00,000.00 | 48,67,592.00 | 6,67,592.00 |

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

25–07–2024

**ಮಹಾಪ್ರಬಂಧಕರು (ಪ್ರ)**

**ಕಾರ್ಯಸೂಚಿ-8**

# ಮಂಗಳೂರು ಕಥೋಲಿಕ್ ಕೊ-ಅಪರೇಟಿವ್ ಬ್ಯಾಂಕ್ ಲಿಮಿಟೆಡ್, ಮಂಗಳೂರು, ದ.ಕ.
## 2024-25ನೇ ಸಾಲಿನ ವಾರ್ಷಿಕ ಅಂದಾಜು ಆಯವ್ಯಯ ಪಟ್ಟಿ

| ಕ್ರ. ಸಂ. | ಆದಾಯ | 2023-24ನೇ ವರ್ಷದ ನೈಜ ಖರ್ಚು | 2024-25ನೇ ವರ್ಷಕ್ಕೆ ಅಂದಾಜು ಆಯವ್ಯಯ |
|---|---|---|---|
| 1 | ಬಡ್ಡಿ ಜಮಾ | 61,05,43,715.13 | 70,00,00,000.00 |
| 2 | ರುಸುಮು ಮತ್ತು ದಲ್ಲಾಳಿ ಶುಲ್ಕ | 5,65,107.38 | 10,00,000.00 |
| 3 | ಇತರ ಜಮೆಗಳು | 2,66,74,832.03 | 3,00,00,000.00 |
| | **ಒಟ್ಟು** | **63,77,83,654.54** | **73,10,00,000.00** |
| | **ಖರ್ಚು** | | |
| 1 | ಠೇವಣಿ ಮತ್ತು ಪಡೆದ ಸಾಲಗಳ ಮೇಲಿನ ಬಡ್ಡಿ | 36,72,58,293.58 | 40,00,00,000.00 |
| 2 | ಸಂಬಳ ಮತ್ತು ಭತ್ಯೆ | 6,17,15,561.38 | 8,00,00,000.00 |
| 3 | ನಿರ್ದೇಶಕರ, ಸ್ಥಳೀಯ ಸಮಿತಿ ಸದಸ್ಯರ ಫೀಸು-ಭತ್ಯೆ | 9,45,188.69 | 16,00,000.00 |
| 4 | ಬಾಡಿಗೆ, ತೆರಿಗೆ, ವಿಮಾ ಕಂತು, ವಿದ್ಯುಚ್ಛಕ್ತಿ, | 2,07,52,693.43 | 2,50,00,000.00 |
| 5 | ಕಾನೂನು ಖರ್ಚು | 5,52,050.00 | 10,00,000.00 |
| 6 | ಅಂಚೆ, ತಂತಿ ಮತ್ತು ದೂರವಾಣಿ | 36,64,687.36 | 40,00,000.00 |
| 7 | ಸವಕಳಿ ಮತ್ತು ರಿಪೇರಿ | 1,92,70,693.00 | 3,00,00,000.00 |
| 8 | ಲೇಖನ ಸಾಮಗ್ರಿ ಮತ್ತು ಮುದ್ರಣ ಖರ್ಚು | 29,29,143.65 | 40,00,000.00 |
| 9 | ಲೆಕ್ಕ ಪರಿಶೋಧನೆ | 6,35,000.00 | 7,50,000.00 |
| 10 | ಜಾಹಿರಾತು ಖರ್ಚು | 26,07,919.79 | 40,00,000.00 |
| 11 | ಸಾದಿಲ್ವಾರು ಖರ್ಚು | 1,93,59,541.25 | 2,60,00,000.00 |
| 12 | ಮಹಾಸಭೆಯ ಖರ್ಚು/ಚುನಾವಣಾ ವೆಚ್ಚ | 13,76,124.96 | 15,00,000.00 |
| 13 | ಸಹಕಾರಿ ನಿಧಿ ಏಜಂಟ್ ಕಮಿಷನ್ | 43,94,580.00 | 45,00,000.00 |
| 14 | ಹೂಡಿಕೆಗಳ ಮೇಲಿನ ಪ್ರಿಮೀಯಮ್ | 0.00 | 2,00,000.00 |
| 15 | ಕಾಯಿದೆ ಅನ್ವಯ ಲೆಕ್ಕ ಪರಿಶೋಧನೆ ಬಗ್ಗೆ | 5,21,560.00 | 6,00,000.00 |
| 16 | ಕಾಯ್ದಿರಿಸಿದ ಹಾಗೂ ತೆರಿಗೆ ಮೊದಲಿನ ಲಾಭ | 13,18,00,617.45 | 14,78,50,000.00 |
| | **ಒಟ್ಟು** | **63,77,83,654.54** | **73,10,00,000.00** |

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

ಮಂಗಳೂರು

25-07-2024

**ಮಹಾಪ್ರಬಂಧಕರು (ಪ್ರ)**

**ಕಾರ್ಯಸೂಚಿ–9**

# ಮಂಗಳೂರು ಕಥೋಲಿಕ್ ಕೊ–ಅಪರೇಟಿವ್ ಬ್ಯಾಂಕ್ ಲಿಮಿಟೆಡ್, ಮಂಗಳೂರು, ದ.ಕ.

**2023–24ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ**

| | | | |
|---|---|---|---|
| | **ನಿವ್ವಳ ಲಾಭ** | | **10,45,20,424.11** |
| 1. | ಮೀಸಲು ನಿಧಿ | 25% | 2,61,30,106.03 |
| 2. | ಸಹಕಾರಿ ಶಿಕ್ಷಣ ನಿಧಿ | 3% | 23,51,709.54 |
| 3. | ಕಟ್ಟಡ ನಿಧಿ | 15% | 1,16,40,962.24 |
| 4. | ಧರ್ಮಾರ್ಥ ದತ್ತ ನಿಧಿ (Charity Fund) | 5% | 32,98,272.63 |
| 5. | ಸಿಬ್ಬಂದಿ ಕ್ಷೇಮ ನಿಧಿ | 0.5% | 3,13,335.90 |
| 6. | ಡಿವಿಡೆಂಡ್ | 10% | 2,89,71,092.00 |
| 7. | Special Reserve under Section 36(1)(viii) of Income Tax Act | | 94,61,812.00 |
| 8. | ಹಂಚಿ ಉಳಿದ ಮೊತ್ತ ಮೀಸಲು ನಿಧಿಗೆ | | 2,23,53,133.77 |
| | **ಒಟ್ಟು** | | **10,45,20,424.11** |

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)

25–07–2024 **ಮಹಾಪ್ರಬಂಧಕರು (ಪ್ರ)**

**ಕಾರ್ಯಸೂಚಿ–9**

## 2024–25ನೇ ಸಾಲಿಗೆ ಶಾಸನಬದ್ದ ಲೆಕ್ಕಪರಿಶೋಧಕರ ನೇಮಕಾತಿಯ ಅನುಮೋದನೆ.

ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿ ಸಂಖ್ಯೆ BLR DoS.RSS No. S 761/07.02.098/2024-25 ದಿನಾಂಕ August 06, 2024 ರಂತೆ ಮೆ। ಮೊಗೆರಾಯ ರತ್ನಮ್ ಆ್ಯಂಡ್ ಕಂಪೆನಿ, ಚಾರ್ಟರ್ಡ್ ಅಕೌಂಟೆಂಟ್ಸ್, ಮಂಗಳೂರು ಇವರನ್ನು 2024–25ನೇ ಸಾಲಿಗೆ ಲೆಕ್ಕ ಪರಿಶೋಧಕರಾಗಿ ನೇಮಕ ಮಾಡಲು ಅನುಮತಿ ನೀಡಿರುತ್ತದೆ ಹಾಗೂ ಈ ಬಗ್ಗೆ ಸಹಕಾರ ಸಂಘಗಳ ಕಾಯ್ದೆ 1959 ಕಲಂ 63ರ ಪ್ರಕಾರ ಸಂಭಾವನೆಯನ್ನು ನಿಗದಿಪಡಿಸಬಹುದಾಗಿದೆ.

**ಮಹಾಪ್ರಬಂಧಕರು(ಪ್ರ)**

**ಕಾರ್ಯಸೂಚಿ–11**

## ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ

| | |
|---|---|
| ದಿನಾಂಕ 31.03.2023ಕ್ಕೆ ಇದ್ದ ಸದಸ್ಯರ ಸಂಖ್ಯೆ | 28944 |
| 2023–24ನೇ ಸಾಲಿನಲ್ಲಿ ಬ್ಯಾಂಕಿಗೆ ಸೇರಿಸಿಕೊಂಡ ಸದಸ್ಯರ ಸಂಖ್ಯೆ | 422 |
| 2023–24ನೇ ಸಾಲಿನಲ್ಲಿ ಸಮಾಪನೆ ಮಾಡಿರುವ ಸದಸ್ಯರ ಸಂಖ್ಯೆ | 1353 |
| ದಿನಾಂಕ 31.03.2024 ಕ್ಕೆ ಇದ್ದ ಸದಸ್ಯರ ಸಂಖ್ಯೆ | 28013 |

ಮಂಗಳೂರು

25–07–2024 **ಮಹಾಪ್ರಬಂಧಕರು (ಪ್ರ)**

# ಬ್ಯಾಂಕಿನ ಉಪನಿಯಮಗಳಿಗೆ ತಿದ್ದುಪಡಿಗಳು

| ಸಂಖ್ಯೆ | ಬ್ಯಾಂಕಿನ ಪ್ರಸ್ತುತ ಉಪನಿಯಮ | ತಿದ್ದುಪಡಿ | ತಿದ್ದುಪಡಿಗೆ ಕಾರಣ |
|---|---|---|---|
| 1 | **ಬ್ಯಾಂಕಿನ ಹೆಸರು:**<br>ಈ ಬ್ಯಾಂಕಿನ ಹೆಸರು : **ಮಂಗಳೂರು ಕಥೋಲಿಕ್ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ** ಎಂದು ಇರತಕ್ಕದ್ದು. | **ಬ್ಯಾಂಕಿನ ಹೆಸರು:**<br>ಈ ಬ್ಯಾಂಕಿನ ಹೆಸರು : **ಎಂಸಿಸಿ ಬ್ಯಾಂಕ್ ನಿಯಮಿತ** ಎಂದು ಇರತಕ್ಕದ್ದು. | ಬ್ಯಾಂಕಿನ ಹೆಸರನ್ನು ಬದಲಾಯಿಸಲು ತಿದ್ದುಪಡಿ ಮಂಡನೆ |
| 4 | **ಪದಗಳ ಅರ್ಥ ವಿವರಣೆ :**<br>(5) "ಕಾರ್ಯಕ್ಷೇತ್ರ": ಎಂದರೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯನ್ನು ಒಳಗೊಂಡಿರುವ ಬ್ಯಾಂಕಿನ ಕಾರ್ಯವ್ಯಾಪ್ತಿಯ ಪ್ರದೇಶ ಮತ್ತು ಬ್ಯಾಂಕಿಗೆ ಸದಸ್ಯತ್ವವನ್ನು ಸದರಿ ಪ್ರದೇಶದಿಂದ ತೆಗೆದುಕೊಳ್ಳತಕ್ಕದ್ದು. | **ಪದಗಳ ಅರ್ಥ ವಿವರಣೆ :**<br>(5) "ಕಾರ್ಯಕ್ಷೇತ್ರ": ಎಂದರೆ ಕರ್ನಾಟಕ ರಾಜ್ಯವನ್ನು ಒಳಗೊಂಡಿರುವ ಬ್ಯಾಂಕಿನ ಕಾರ್ಯವ್ಯಾಪ್ತಿಯ ಪ್ರದೇಶ ಮತ್ತು ಬ್ಯಾಂಕಿಗೆ ಸದಸ್ಯತ್ವವನ್ನು ಸದರಿ ಪ್ರದೇಶದಿಂದ ತೆಗೆದುಕೊಳ್ಳತಕ್ಕದ್ದು. | ಬ್ಯಾಂಕಿನ ಕಾರ್ಯವ್ಯಾಪ್ತಿಯು ಕರ್ನಾಟಕ ರಾಜ್ಯಕ್ಕೆ ವಿಸ್ತರಿಸಿದ್ದು, ಸಂಬಂಧಪಟ್ಟ ತಿದ್ದುಪಡಿಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳ ಪ್ರಕಾರ ತಿದ್ದುಪಡಿಗೆ ಮಂಡಿಸಿದೆ. |
| 5 | **5. ಬ್ಯಾಂಕಿನ ಧ್ಯೇಯ ಮತ್ತು ಉದ್ದೇಶಗಳು ಈ ಕೆಳಕಂಡಂತೆ ಇರತಕ್ಕದ್ದು :**<br>(24) ಹೊಸತು | **5. ಬ್ಯಾಂಕಿನ ಧ್ಯೇಯ ಮತ್ತು ಉದ್ದೇಶಗಳು ಈ ಕೆಳಕಂಡಂತೆ ಇರತಕ್ಕದ್ದು :**<br>ಜೀವ ವಿಮೆ (24) ಮತ್ತು ಸಾಮಾನ್ಯ ವಿಮೆಗಾಗಿ ವಿಮಾ ಸೇವೆಗಳಿಗೆ ಏಜೆಂಟ್ ಆಗಿ ಕಾರ್ಯನಿರ್ವಹಿಸಲು | ಜೀವ ವಿಮೆ ಮತ್ತು ಸಾಮಾನ್ಯ ವಿಮಾ ಸೌಲಭ್ಯವನ್ನು ಬ್ಯಾಂಕಿನ ಗ್ರಾಹಕರಿಗೆ ಸುಲಭವಾಗಿ ಒದಗಿಸಲು |
| 100 | **ಲೆಕ್ಕಪರಿಶೋಧನೆ :**<br>(1) ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕನು ಲೆಕ್ಕಪತ್ರಗಳನ್ನು, ಪುಸ್ತಕಗಳನ್ನು, ಲೆಕ್ಕಗಳನ್ನು, ದಸ್ತಾವೇಜುಗಳನ್ನು ಮತ್ತು ಇತರೆ ದಾಖಲೆಗಳನ್ನು ದೈನಂದಿನ ಆಧಾರದ ಮೇಲೆ ನಿಯತವಾಗಿ ನಿರ್ವಹಿಸತಕ್ಕದ್ದು ಮತ್ತು ಇಂದೀಕರಿಸತಕ್ಕದ್ದು ಹಾಗೂ ಅಂಥಹ ಲೆಕ್ಕಪತ್ರಗಳನ್ನು ಹಿಂದಿನ ಸಹಕಾರ ವರ್ಷದಲ್ಲಿದ್ದಂತೆ ಆಸ್ತಿ ಹೊಣೆ ಪಟ್ಟಿ, ಷೆಡ್ಯೂಲುಗಳನ್ನು ಮತ್ತು ಇತರೆ ತಃಖ್ತೆಗಳನ್ನು ಒಳಗೊಂಡ ಆರ್ಥಿಕ ತಃಖ್ತೆಗಳ ಸಹಿತ ಪ್ರತಿ ವರ್ಷ ಏಪ್ರಿಲ್ ತಿಂಗಳ ಅಂತ್ಯದೊಳಗೆ ಲೆಕ್ಕಪರಿಶೋಧಕನ ಮುಂದೆ ಹಾಜರುಪಡಿಸಲು ವ್ಯವಸ್ಥೆ ಮಾಡತಕ್ಕದ್ದು. **ಪ್ರತಿ ವರ್ಷ ಸಹಕಾರ ಲೆಕ್ಕಪರಿಶೋಧಕ ನಿರ್ದೇಶಕನು ಪ್ರಕಟಿಸುವ ಲೆಕ್ಕಪರಿಶೋಧಕರ ಮತ್ತು ಲೆಕ್ಕಪರಿಶೋಧನಾ ಫರ್ಮುಗಳ ತಂಡದ ಪಟ್ಟಿಯಿಂದ** ಬ್ಯಾಂಕಿನ ಸಾಮಾನ್ಯ ಸಭೆಯಿಂದ ನೇಮಕವಾದ ಲೆಕ್ಕಪರಿಶೋಧಕನು ಲೆಕ್ಕಪತ್ರಗಳನ್ನು ಪರಿಶೋಧಿಸತಕ್ಕದ್ದು.<br><br>(3) ಹಿಂದಿನ ವರ್ಷದ ಲೆಕ್ಕಪರಿಶೋಧನಾ ವರದಿಯನ್ನು ಪ್ರತಿ ವರ್ಷ **ಸೆಪ್ಟಂಬರ್ 1ನೇ** ತಾರೀಖಿನೊಳಗೆ ಪಡೆಯತಕ್ಕದ್ದು ಮತ್ತು ಅದರಲ್ಲಿ ತಿಳಿಸಿರುವ ಲೋಪದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ಸೇರ್ಪಡಿಸಲು ತೆಗೆದುಕೊಂಡ ಕ್ರಮವನ್ನುಳ್ಳ ಮಂಡಲಿಯ ಅನುಪಾಲನಾ ವರದಿ ಸಹಿತ ಪ್ರತಿ ವರ್ಷ ಸೆಪ್ಟಂಬರ್ ತಿಂಗಳ 25ನೇ ದಿನದೊಳಗೆ ನಡೆಯುವ ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸತಕ್ಕದ್ದು.<br><br>(5) ಬ್ಯಾಂಕಿನ ಸಾಮಾನ್ಯ ಸಭೆಯು ಲೆಕ್ಕಪರಿಶೋಧಕನ ಸೇವೆಗಳಿಗೆ ಕೊಡಬಹುದಾದ ಸಂಭಾವನೆಯನ್ನು, ಬ್ಯಾಂಕಿನ ದುಡಿಯುವ ಬಂಡವಾಳ ಮತ್ತು ವ್ಯವಹಾರವನ್ನು ಆಧರಿಸಿ ಮತ್ತು ಲೆಕ್ಕಪರಿಶೋಧನಾ ನಿರ್ದೇಶಕರು ಕಾಲ ಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳ ಪ್ರಕಾರ ನಿರ್ಧರಿಸತಕ್ಕದ್ದು. | **ಲೆಕ್ಕಪರಿಶೋಧನೆ :**<br>(1) ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕನು ಲೆಕ್ಕಪತ್ರಗಳನ್ನು, ಪುಸ್ತಕಗಳನ್ನು, ಲೆಕ್ಕಗಳನ್ನು, ದಸ್ತಾವೇಜುಗಳನ್ನು ಮತ್ತು ಇತರೆ ದಾಖಲೆಗಳನ್ನು ದೈನಂದಿನ ಆಧಾರದ ಮೇಲೆ ನಿಯತವಾಗಿ ನಿರ್ವಹಿಸತಕ್ಕದ್ದು ಮತ್ತು ಇಂದೀಕರಿಸತಕ್ಕದ್ದು ಹಾಗೂ ಅಂಥಹ ಲೆಕ್ಕಪತ್ರಗಳನ್ನು ಹಿಂದಿನ ಸಹಕಾರ ವರ್ಷದಲ್ಲಿದ್ದಂತೆ ಆಸ್ತಿ ಹೊಣೆ ಪಟ್ಟಿ, ಷೆಡ್ಯೂಲುಗಳನ್ನು ಮತ್ತು ಇತರೆ ತಃಖ್ತೆಗಳನ್ನು ಒಳಗೊಂಡ ಆರ್ಥಿಕ ತಃಖ್ತೆಗಳ ಸಹಿತ ಪ್ರತಿ ವರ್ಷ ಏಪ್ರಿಲ್ ತಿಂಗಳ ಅಂತ್ಯದೊಳಗೆ ಲೆಕ್ಕಪರಿಶೋಧಕನ ಮುಂದೆ ಹಾಜರುಪಡಿಸಲು ವ್ಯವಸ್ಥೆ ಮಾಡತಕ್ಕದ್ದು. **ಪ್ರತಿ ವರ್ಷ ಭಾರತೀಯ ರಿಸರ್ವ್ ಬ್ಯಾಂಕು ಅನುಮೋದಿಸಿ ಬ್ಯಾಂಕಿನ** ಸಾಮಾನ್ಯ ಸಭೆಯಿಂದ ನೇಮಕವಾದ ಲೆಕ್ಕಪರಿಶೋಧಕನು ಲೆಕ್ಕಪತ್ರಗಳನ್ನು ಪರಿಶೋಧಿಸತಕ್ಕದ್ದು.<br><br>(3) ಹಿಂದಿನ ವರ್ಷದ ಲೆಕ್ಕಪರಿಶೋಧನಾ ವರದಿಯನ್ನು ಪ್ರತಿ ವರ್ಷ ಜೂನ್ 30ನೇ ತಾರೀಖಿನೊಳಗೆ ಪಡೆಯತಕ್ಕದ್ದು ಮತ್ತು ಅದರಲ್ಲಿ ತಿಳಿಸಿರುವ ಲೋಪದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ಸೇರ್ಪಡಿಸಲು ತೆಗೆದುಕೊಂಡ ಕ್ರಮವನ್ನುಳ್ಳ ಮಂಡಲಿಯ ಅನುಪಾಲನಾ ವರದಿ ಸಹಿತ ಪ್ರತಿ ವರ್ಷ ಸೆಪ್ಟಂಬರ್ ತಿಂಗಳ 25ನೇ ದಿನದೊಳಗೆ ನಡೆಯುವ ವಾರ್ಷಿಕ ಸಾಮಾನ್ಯ ಸಭೆಯ ಮುಂದೆ ಮಂಡಿಸತಕ್ಕದ್ದು.<br><br>(5) ಬ್ಯಾಂಕಿನ ಸಾಮಾನ್ಯ ಸಭೆಯು ಲೆಕ್ಕಪರಿಶೋಧನಾ ನಿರ್ದೇಶಕನಿಂದ ಕಾಲ ಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳನುಸಾರವಾಗಿ ಲೆಕ್ಕ ಪರಿಶೋಧಕನ ಸೇವೆಗಳಿಗೆ ನೀಡಬಹುದಾದ ಸಂಭಾವನೆಯನ್ನು ನಿರ್ಧರಿಸತಕ್ಕದ್ದು. | ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳ ಪ್ರಕಾರ ತಿದ್ದುಪಡಿಗೆ ಮಂಡಿಸಿದೆ. |
| 101 | **ಆಸ್ತಿ – ಜವಾಬ್ದಾರಿ ಪಟ್ಟಿ ಮತ್ತು ಇತರ ಆರ್ಥಿಕ ಪಟ್ಟಿಗಳು :**<br>(3) ಆಸ್ತಿ ಜವಾಬ್ದಾರಿ ಪಟ್ಟಿ, ಲಾಭ ನಷ್ಟ ಪಟ್ಟಿ ಮತ್ತು ಇತರ ಆರ್ಥಿಕ ಪಟ್ಟಿಗಳನ್ನು ಲೆಕ್ಕಪರಿಶೋಧಕರ ವರದಿಯೊಂದಿಗೆ ಸಾಲಾಖೈರಿನ 6 ತಿಂಗಳೊಳಗಾಗಿ ಬ್ಯಾಂಕಿನ ಕಾರ್ಯಕ್ಷೇತ್ರದಲ್ಲಿ ಪ್ರಸಾರದಲ್ಲಿರುವ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು. ಹಾಗೆ 6 ತಿಂಗಳೊಳಗಾಗಿ ಪ್ರಕಟಿಸಲು ಸಾಧ್ಯವಾಗದಿದ್ದಲ್ಲಿ 3 ತಿಂಗಳ ಕಾಲಾವಕಾಶವನ್ನು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಪಡೆಯತಕ್ಕದ್ದು. | **ಆಸ್ತಿ – ಜವಾಬ್ದಾರಿ ಪಟ್ಟಿ ಮತ್ತು ಇತರ ಆರ್ಥಿಕ ಪಟ್ಟಿಗಳು :**<br>(3) ಆಸ್ತಿ ಜವಾಬ್ದಾರಿ ಪಟ್ಟಿ, ಲಾಭ ನಷ್ಟ ಪಟ್ಟಿ ಮತ್ತು ಇತರ ಆರ್ಥಿಕ ಪಟ್ಟಿಗಳನ್ನು ಲೆಕ್ಕಪರಿಶೋಧಕರ ವರದಿಯೊಂದಿಗೆ ಸಾಲಾಖೈರಿನ 3 ತಿಂಗಳೊಳಗಾಗಿ ಬ್ಯಾಂಕಿನ ಕಾರ್ಯಕ್ಷೇತ್ರದಲ್ಲಿ ಪ್ರಸಾರದಲ್ಲಿರುವ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು. ಹಾಗೆ 3 ತಿಂಗಳೊಳಗಾಗಿ ಪ್ರಕಟಿಸಲು ಸಾಧ್ಯವಾಗದಿದ್ದಲ್ಲಿ 3 ತಿಂಗಳ ಕಾಲಾವಕಾಶವನ್ನು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಪಡೆಯತಕ್ಕದ್ದು. | ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳ ಪ್ರಕಾರ ತಿದ್ದುಪಡಿಗೆ ಮಂಡಿಸಿದೆ. |
| 104 | **ಆಂತರಿಕ ಲೆಕ್ಕಪರಿಶೋಧಕರ ಅರ್ಹತೆಗಳು :**<br>ಉಪವಿಧಿ 103ರಡಿಯಲ್ಲಿ ನೇಮಕಗೊಳ್ಳುವ ಆಂತರಿಕ ಲೆಕ್ಕಪರಿಶೋಧಕರು ಕನಿಷ್ಠ ಪಕ್ಷ ಈ ಕೆಳಗಿನ ಅರ್ಹತೆಯಲ್ಲಿ ಒಂದನ್ನಾದರೂ ಹೊಂದಿರತಕ್ಕದ್ದು.<br>(ಎ) ಸಹಕಾರದಲ್ಲಿ ಉನ್ನತ ಡಿಪ್ಲೊಮಾ ಪಡೆದ ಮತ್ತು ಸಹಕಾರ ಸಂಘಗಳ ಲೆಕ್ಕಪರಿಶೋಧನೆಯಲ್ಲಿ ಕನಿಷ್ಠ ಮೂರು ವರ್ಷಗಳ ಅನುಭವುಳ್ಳ ನಿವೃತ್ತ ಅಧಿಕಾರಿ;<br>(ಬಿ) ಸಹಕಾರ ಸಂಘಗಳ ಲೆಕ್ಕಪರಿಶೋಧನೆಯಲ್ಲಿ ಕನಿಷ್ಠ ಮೂರು ವರ್ಷಗಳ ಅನುಭವುಳ್ಳ ಚಾಟರ್ಡ್ ಅಕೌಂಟೆಂಟ್;<br>(ಸಿ) ಬ್ಯಾಂಕಿನ ಪರಿವೀಕ್ಷಣೆಯಲ್ಲಿ ಅನುಭವ ಪಡೆದ ರಿಸರ್ವ್ ಬ್ಯಾಂಕಿನ / ಯಾವುದೇ ವಾಣಿಜ್ಯ ಬ್ಯಾಂಕಿನ ನಿವೃತ್ತ ಅಧಿಕಾರಿ. | **ಆಂತರಿಕ ಲೆಕ್ಕಪರಿಶೋಧಕರ ಅರ್ಹತೆಗಳು :**<br>ಉಪವಿಧಿ 103ರಡಿಯಲ್ಲಿ ನೇಮಕಗೊಳ್ಳುವ ಆಂತರಿಕ ಲೆಕ್ಕಪರಿಶೋಧಕರು ಭಾರತೀಯ ರಿಸರ್ವ್ ಬ್ಯಾಂಕು ನಿಗದಿಪಡಿಸಿದ ಅರ್ಹತೆ ಹೊಂದಿರತಕ್ಕದ್ದು. | ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳ ಪ್ರಕಾರ ತಿದ್ದುಪಡಿಗೆ ಮಂಡಿಸಿದೆ. |

# Milestone Celebration (1000 Crores Business Turnover) 21.01.2024




# 17th Brahmmavar Branch Inauguration 03.03.2024



# M.C.C. BANK LTD

Estd - 1912

Admin. Office : MCC Bank Bldg, Hampankatta, Mangalore 575 001

## EDUCATION made AFFORDABLE with our Loans...

*Domestic & Overseas Higher Studies loans at attractive interest & easy terms*

## EDUCATION LOANS

just at **9.25%**




**Contact your nearest Branch**

| | | | |
|---|---|---|---|
| **Hampankatta:** 7090701102, 0824-2424306, 2423454 | **Kulshekar:** 7090701114, 0824-2230585 | **Kinnigoli:** 7090701119, 0824-2295900 | **Kundapur:** 7090701118, 08254-235200 |
| **Kankanady:** 7090701127, 0824-2437706, 2987706 | **Moodbidri:** 7090701125, 08258-237079 | **Surathkal:** 7090701120, 0824-2477510 | **Puttur:** 7090701130, 08251-231323 |
| **Ashoknagar:** 7090701126, 0824-2458316, 2458716 | **Shirva:** 7090701117, 0820-2554544 | **Ullal:** 7090701116, 0824-2464300, 2463300 | **B.C.Road:** 7090701109, 08255-230789 |
| **Morgansgate:** 7090701124, 0824-2417756 | **Bajpe:** 7090701123, 0824-2251998 | **Udupi:** 7090701111, 0820-2529666, 2529566 | **Karkal:** 7090701128, 08258-235600 |
| | | | **Bramhavar:** 0820 2554477, 70907 06969 |

**HO Ph : +91 70907 01105 | Toll free No : 1800 123 2966**

**Email: ho@mccbank.in | Web: www.mccbank.in**

Book Post
If Undelivered Please return to :
The General Manager
MCC Bank Ltd
Hampankatta, Mangaluru - 575 001

To